ಕಲ್ಯಾಣ ಕಿರಣ

ಡಿಸೆಂಬರ್ 1991

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಶರಣ ಮೇಳ

1992, ಜನವರಿ 13, 14, 15 ರಂದು



ಆಹ್ವಾನ ಪತ್ರಿಕೆ

|| ಓಂ ಶ್ರೀಗುರುಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನದ ಅಂಗವಾಗಿ

1992 ನೇ ಜನವರಿ 12, 13, 14 ಮತ್ತು 15 ರಂದು

ನಡೆಯಲಿರುವ ಚಾರಿತ್ರಿಕ, ಐದನೆಯ

ಶರಣ ಮೇಳ

ಧ್ವಜಾರೋಹಣದ ಸನ್ನಿವೇಶದಲ್ಲಿ ಹಾಡಲಾಗುವ ಗೀತೆ

ಧ್ವಜಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಕ್ರಾಂತಿ ಕಹಳೆ ಮೊಳಗುತಿದೆ । ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ ತೊಡೆದೀಗ ॥
ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಸಮತಾ ಪತಾಕೆಯ ಬಸವ ತತ್ತ್ವದೊಡನೆ ಮೆರೆಸುತ ॥
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ ॥೧॥

ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು ॥
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ ॥೨॥

ಜಾತಿಮತ ಪಂಥಗಳ ಕೀಳು ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ ॥೩॥

ರಚನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.**

ವಿ. ಸೂ. : ಶರಣ ಮೇಳಕ್ಕೆ ಬರುವವರು ಆಹ್ವಾನ ಪತ್ರಿಕೆ ಸಹಿತ ಇರುವ ಈ ಪ್ರತಿಯನ್ನು ಜೊತೆಗೆ ತನ್ನಿರಿ.

ಕಲ್ಯಾಣ ಕಿರಣ

ಸಂಪುಟ 20 ಸಂಚಿಕೆ : 8 ಡಿಸೆಂಬರ್. 1991 ಬಸವ. ಶಕೆ : 886

||ಓಂ ಶ್ರೀ ಗುರುಬಸವಲಿಂಗಾಯ ನಮಃ ||

ಬಸವ ಕ್ರಾಂತಿ ದಿನದ ಅಂಗವಾಗಿ
ಕೂಡಲ ಸಂಗಮ ಸುಕ್ಷೇತ್ರದಲ್ಲಿ

1992 ನೆಯ ಜನವರಿ

12,13,14 ಮತ್ತು 15 ರಂದು

ನಡೆಯಲಿರುವ

ಶರಣ ಮೇಳಕ್ಕೆ ಸ್ವಾಗತ

ಜನ್ಮ ಭೂಮಿ ಭಾರತ ಧರ್ಮಕ್ಷೇತ್ರ ಸಂಗಮ
ಶರಣ ಮೇಳಕೆ ಬಂದಿರುವ ಶರಣರಿಗೆ ಸ್ವಾಗತ ||ಪ||

ಗುರುಗಳಿಗೆ ಸ್ವಾಗತ ಹಿರಿಯರಿಗೆ ಸ್ವಾಗತ
ಕಿರಿಯರಿಗೆ ಸ್ವಾಗತ ಸರ್ವರಿಗೂ ಸ್ವಾಗತ ||ಅ.ಪ||

ಧರ್ಮ ನೀತಿ ನ್ಯಾಯ ಶಾಂತಿ
ಸಾರುತಿರುವ ಮೇಳವು
ಮನುಜರೆಲ್ಲರೊಂದೆ ಎಂದು
ಆದರಿಸುವ ಮೇಳವು || ಓ ದಿವ್ಯ ಮೇಳವು ||೧||

ಶ್ರೀ ಸಂಗಮೇಶನ ದಿವ್ಯ ತಾಣ ಸಂಗಮ
ಗುರು ಬಸವೇಶನ ಐಕ್ಯ ಕ್ಷೇತ್ರ ಸಂಗಮ
ಮಲಪ್ರಭೆ-ಕೃಷ್ಣೆಯರು ಸೇರುತಿರುವ ಸಂಗಮ
ಮಹಾಮನೆಯ ಹೊಂದಿರುವ ಧರ್ಮಕ್ಷೇತ್ರ ಸಂಗಮ
ಓ ದಿವ್ಯ ಕ್ಷೇತ್ರವು ||೨||

ಬಸವ ಕ್ರಾಂತಿ ದಿವ್ಯ ದಿನದಿ ನಾವು-ನೀವು ಸೇರುವಾ
ಗುರು ಬಸವಣ್ಣನ ಹಿಗ್ಗಿನಿಂದ ಸ್ಮರಿಸುವಾ
ಶರಣ ಧರ್ಮ ಅರಿಯುವ ಶರಣರಾಗಿ ಬೆಳೆಯುವ
ಬಸವ ಕಿರಣವಾಗಿ ನಾವು ಇಲ್ಲಿಂದ ಸಾಗುವಾ ||
ಓ ದಿವ್ಯ ಮೇಳವು. ಓ ದಿವ್ಯ ಮೇಳವು. ||೩||

ರಚನೆ : ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ರಾಜ್ಯವ ಕಟ್ಟಲು ಪ್ರೈಜೆ

(ಧ್ವಜಾರೋಹಣಕ್ಕೆ ಮೊದಲು ಹಾಡುವ ಗೀತೆ)

ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು
ಕರ್ತಗೆ ನಿಷ್ಠೆಯಿಂ ವಂದಿಪೆನು ||ಪ||

ಬಸವನ ಸ್ಮರಿಸಿ, ಲೋಕದ ಲೇಸಿಗೆ
ಪ್ರೈಜೆಯ ತೊಟ್ಟು ದುಡಿಯುವೆನು ||ಅ.ಪ.||

ಭಕ್ತಿಯ ಜಲದೊಳು ಮೈತೊಳೆಯುವೆನು
ಜ್ಞಾನದ ವಸ್ತ್ರವ ಧರಿಸುವೆನು|
ದೀನ ದಲಿತರ ಸೇವೆಯ ಗೈಯಲು
ಗಂಧದೊಲ್ ಬಾಳನು ಸವೆಸುವೆನು||೧||

ಮಾನವರೆಲ್ಲರು ದೇವನ ಮಕ್ಕಳು
ಎನ್ನುತ ಧ್ವಜವನು ಹಾರಿಪೆನು|
ಗುರು ಬಸವಣ್ಣನ ವಚನದ ಸೌರಭ
ಹರಡಲು ಕಂಕಣ ಕಟ್ಟುವೆನು ||೨||

ಧರ್ಮದ ಕವಚವ ಧರಿಸುವೆನು
ತತ್ತ್ವದ ಖಡ್ಗವ ಹಿಡಿಯುವೆನು|
ಕರ್ತನ ಕಮ್ಮಟವಾದೀ ಜಗದೊಳು
ಕಲ್ಯಾಣ ರಾಜ್ಯವ ಕಟ್ಟುವೆನು ||೩||

- ಜಗದ್ಗುರು ಮಾತೆ ಮಹಾದೇವಿ

(ಈ ಗೀತೆಯಲ್ಲಿ ಬರುವ ಭಾವವನ್ನು ಅರಿತು, ಸಂಕಲ್ಪಿಸಿ, ಕಲ್ಯಾಣ ರಾಜ್ಯವನ್ನು ಕಟ್ಟಲು ಬಾಳುವೆ ಎಂದು ಪ್ರೈಜೆ (ಪ್ರತಿಜ್ಞೆ)ಯನ್ನು ಹೊತ್ತು ಧ್ವಜಾರೋಹಣ ಮಾಡಬೇಕು)

||ಓಂ ಶ್ರೀ ಗುರುಬಸವಲಿಂಗಾಯ ನಮಃ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಕ್ರಾಂತಿ ದಿನದ ಅಂಗವಾಗಿ

ಶರಣ ಮೇಳ

೧೯೯೨ ನೆಯ ಜನವರಿ ೧೨,೧೩,೧೪ ಮತ್ತು ೧೫ ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988 ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಮೂರೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು. ತುಂಬಿ ನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನ ಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ(ಮಕರಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು, ಐದನೆಯ ಶರಣ ಮೇಳವು 1992 ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಟಾಗಲಿದೆ. ಹಲವಾರು ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವ ಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2 ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ,
ಬೆಂಗಳೂರು - 560 010
ದೂರವಾಣಿ 325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ-587115
ತಾ|| ಹುನಗುಂದ, ಜಿ|| ಬಿಜಾಪುರ

ದೂರವಾಣಿ : 38

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ ಪ್ರಾರಂಭೋತ್ಸವ

ದಿ. 9-1-1992 ಗುರುವಾರ — ಸಮಯ : ಬೆಳಿಗ್ಗೆ 8 ಗಂಟೆ

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಬಸವ ಧರ್ಮ ಪೀಠ, ಕೂಡಲ ಸಂಗಮ

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಹಗಲು- ರಾತ್ರಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು, ಗುರುವಾರ ದಿ. 16-1- 1992 ರಂದು 8 ಗಂಟೆಗೆ ಮಂಗಲಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ಶರಣ ಬಂಧುಗಳಿಗೆ ಸೂಚನೆ

ಅಖಂಡ ವಚನ ಪಠಣದಲ್ಲಿ ಭಾಗವಹಿಸುವ ಅಪೇಕ್ಷೆಯುಳ್ಳ ಶರಣರು ಮೊದಲಿಗೇ ತಮ್ಮ ಹೆಸರುಗಳನ್ನು ಬರೆದು ಕಳಿಸಬಹುದು. 168 ಜನರಿಗೆ ಮಾತ್ರ ಅವಕಾಶವಿರುವ ಕಾರಣ ಬೇಗನೆ ಹೆಸರುಗಳನ್ನು ತಿಳಿಸುವುದು ಕ್ಷೇಮ.

ನಿಯಮ : ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಮೇಲುವಸ್ತ್ರವನ್ನು ಹೊದ್ದು ಪಠಣ ಮಾಡಬೇಕು.

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ

ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ

-ಮರುಳ ಶಂಕರದೇವರು

ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ "ವಚನ ಸಂಗಮ" ಕನ್ನಡ ಪುಸ್ತಕವು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷಗಳಲ್ಲಿ ಭಾವಾರ್ಥ ಸಹಿತವಾಗಿ ಲಭ್ಯವಿರುತ್ತದೆ. ಬೆಲೆ : 5-50

ಶರಣ ಮೇಳ-ಬಸವ ಧರ್ಮ ಸಂಸತ್ ಸಭೆ ಚಿಂತನಗೋಷ್ಠಿ

ದಿ. 12-1-1992, ಭಾನುವಾರ — ಸಮಯ ಬೆಳಿಗ್ಗೆ 10 ಗಂಟೆ

ಚಿಂತನಗೋಷ್ಠಿಗೆ ಮುನ್ನ ಧ್ವಜಾರೋಹಣ
ಮಾಡುವವರು : ಶರಣೆ ಸಂಗಮ್ಮತಾಯಿ ಕರವೀರಶೆಟ್ಟರು, ಹುಬ್ಬಳ್ಳಿ
ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಅಧ್ಯಕ್ಷತೆ : ಶರಣ ಕುಮಾರ ಕಕ್ಕಯ್ಯ ಪೋಳ, ವಿಜಾಪುರ
ಸಭಾಪತಿ : ಶರಣ ಎನ್ ಪುಟ್ಟರುದ್ರಪ್ಪ,ಬೆಂಗಳೂರು
ಮುಖ್ಯ ಅತಿಥಿಗಳು : ಶರಣ ಬಸವಣ್ಣ ಹಂಪನಗೌಡರು ವಿಜಾಪುರ
ಪ್ರಸ್ತಾವನೆ : ಶ್ರೀ ಜಗದ್ಗುರು ಮಾತೆ ಮಹಾದೇವಿ
ಚಿಂತನ-ಮಂಥನ : ಶರಣ- ಶರಣೆಯರಿಂದ

ಚರ್ಚಿಸಲಾಗುವ ವಿಷಯಗಳು

1. ಬಸವ ಧರ್ಮ ಪೀಠ ಸ್ಥಾಪನೆ, ನಿಯಮಾವಳಿ, ಪೀಠಾಧಿಕಾರಿಗಳ ಆಯ್ಕೆಯ ವಿಧಾನ, ಇದರಲ್ಲಿ ಬಸವ ಧರ್ಮ ಸಂಸತ್ ಸದಸ್ಯರ ಹೊಣೆಗಾರಿಕೆ.
2. ಪ್ರತಿವರ್ಷ ನಡೆಯುವ ಶರಣ ಮೇಳದಲ್ಲಿ ಒಂದು ಮಹತ್ವದ ಧಾರ್ಮಿಕ ವಿಧಿ(ಆಚರಣೆ)ಯನ್ನು ಅಳವಡಿಸುವಿಕೆ.
3. ಬಸವ ಧರ್ಮ ಸಂಸತ್ ಸದಸ್ಯರ ಕೆಲವು ನಂಬಿಕೆ, ಕಡ್ಡಾಯವಾದ ಆಚರಣೆಗಳು.
4. ಕಾಫಿ-ಚಹಾಪಾನ ಕುರಿತು
5. ಉಷಃಪಾನ-ನಿಸರ್ಗ ಚಿಕಿತ್ಸೆ-ಧಾರ್ಮಿಕ ನೇಮ
6. ಜಯಘೋಷದಲ್ಲಿ ಮಾರ್ಪಾಡು
7. ನೂತನ ಸದಸ್ಯರ ಪರಿಚಯ, ಪ್ರತಿಜ್ಞಾವಿಧಿ

8). ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳ ಅವಧಿ

ಈ ಪ್ರಶ್ನೆ-ಸಮಸ್ಯೆ ಕುರಿತು ಚಿಂತನೆ ಮಾಡಿಕೊಂಡು ಬರಬೇಕು. ಭಾಗವಹಿಸಿದವರು ಯಾವುದಾದರೂ ಮಹತ್ವದ ಪ್ರಶ್ನೆಯನ್ನು ಸೂಚಿಸಿದರೆ ಅದರ ಪ್ರಾಮುಖ್ಯತೆಯ ಆಧಾರದ ಮೇಲೆ ಅದನ್ನು ಚರ್ಚೆ-ನಿರ್ಣಯಗಳಿಗೆ ಎತ್ತಿಕೊಳ್ಳಲಾಗುವುದು. ಕೇಳುವ ಸಮಸ್ಯೆಗಳೇನಾದರೂ ಇದ್ದರೆ ಸಿದ್ಧತೆ ಮಾಡಿಕೊಂಡು ಬರಬಹುದು ಮತ್ತು ಮೇಲೆ ಸೂಚಿಸಿದ ವಿಷಯಗಳ ಬಗ್ಗೆ ಚಿಂತನೆ ಮಾಡಿಕೊಂಡು ಬಂದರೆ ಒಳ್ಳೆತು.

ಉಪಸ್ಥಿತರು

ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಹುಲ್ಸೂರು
ಪೂಜ್ಯ ಶ್ರೀ ಬಸವರಾಜ ಸ್ವಾಮಿಗಳು, ಕುಂದಗೋಳ
ಪೂಜ್ಯ ಶ್ರೀ ವೀರಮಹಾಂತೇಶ ಶಿವಾಚಾರ್ಯರು, ನೀಲಗುಂದ
ಪೂಜ್ಯ ಶ್ರೀ ನೀಲಕಂಠ ಸ್ವಾಮಿಗಳು, ಬಸವ ಮಂಟಪ, ತಿಪಟೂರು
ಪೂಜ್ಯ ಶ್ರೀ ರಾಮಲಿಂಗ ಸ್ವಾಮಿಗಳು, ಬಿಜಾಪುರ
ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ
ಪೂಜ್ಯ ಶ್ರೀ ಬಸಮ್ಮ ತಾಯಿ, ಗುಲಬರ್ಗಾ

ಶರಣರುಗಳಾದ :

ಅಂದಾನಪ್ಪ ಕುಂದರಗಿ, ಗಜೇಂದ್ರಗಡ
ಡಾ|| ಜಿ. ಆರ್. ತಮಗೊಂಡ, ಬಾಗಿಲಕೋಟೆ
ಡಾ|| ಸಿ ಎಸ್. ಪುರಾಣಮಠ, ರಾಣೇಬೆನ್ನೂರು
ಎಸ್ ಎಸ್. ಹಿರಂಡಗಿ, ಬಿಜಾಪುರ
ಬಿ. ಸಿ. ಚಂದ್ರಪ್ಪಾಜಿ ಅರಸು, ಬ್ರಹ್ಮಸಂದ್ರ
ಬಸವರಾಜ ಲುಕ್, ಬಾಗಲಕೋಟೆ
ಬಸವರಾಜ ಮಡಿವಾಳರ, ಅಲಮಟ್ಟಿ
ಹೆಚ್ ಎಸ್ ಬಸವರಾಜ, ಭದ್ರಾವತಿ
ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಟಿ. ಬಸವರಾಜಪ್ಪ, ವಿಜಯಪುರ
ಬಸವಕುಮಾರ ಪಾಟೀಲ, ಬೀದರ
ಡಾ|| ಶಿವಗೌಡ ಪಾಟೀಲ, ಸಂಕೇಶ್ವರ
ಬಾಣೂರು ಚನ್ನಪ್ಪ, ಚಿಕ್ಕಮಗಳೂರು
ಡಾ|| ನಿತೀನ ಚಂದ್ರ ಹತ್ತೀಕಾಳ, ಧಾರವಾಡ
ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ವೀರೇಂದ್ರ ಪಾಟೀಲ ಮಹಾಮನೆ, ಬೆಳಗಾಂವ
ಚಂದ್ರಶೇಖರಪ್ಪ ಕರವೀರಶೆಟ್ಟರು, ಹುಬ್ಬಳ್ಳಿ
ಎಸ್. ಬಿ. ಸುಲ್ತಾನಪುರಿ, ಬೆಳಗಾಂವ
ಮುನಿನಾರಾಯಣಪ್ಪ, ವಿಜಯಪುರ
ಶಾರದಮ್ಮ ಭೀಮಲಿಂಗನಗೌಡ ಬಳ್ಳಾರಿ
ಎಸ್. ಲಿಂಗಣ್ಣ, ಚಿತ್ರದುರ್ಗ
ರಾಮಲಿಂಗಪ್ಪ ದೇವಣಿ, ಬೀದರ
ಬಾಲಚಂದ್ರ ಚೆನ್ನಿ, ಮಹಾಲಿಂಗಪುರ
ಚಂದ್ರಶೇಖರಪ್ಪ ಯರನಾಳ, ಇಳಕಲ್
ವಿಶ್ವನಾಥ ಡೋಣೂರು, ಶಹಾಪುರ
ಜಿ.ಜಿ. ಪಾಟೀಲ, ಕೂಡಲಸಂಗಮ
ಆರ.ಎಸ್. ಹೊನ್ನಪ್ಪನವರು
ಬಿ.ಎಂ. ಹೊರಕೇರಿ, ಬಾದಾಮಿ
ಡಿ.ಬಿ. ಕೊಳ್ಳಿ, ಬೈಲಹೊಂಗಲ
ಮೃತ್ಯುಂಜಯ ಅಂಗಡಿ, ಕಡಕೋಳ
ಎಂ. ಸುಬ್ಬಣ್ಣ, ಬೆಂಗಳೂರು
ಎಲ್. ಗುರುಸ್ವಾಮಿ, ಬೆಂಗಳೂರು
ಮೆ. ನ. ಬೊಮ್ಮಲಿಂಗಪ್ಪ
ಜಿ.ಚನ್ನಯ್ಯ, ಚಳ್ಳಕೆರೆ
ಶಿವಾನಂದಪ್ಪ ರುಳಿ, ಇಳಕಲ್
ಸಿ. ಬಸವರಾಜು, ತುಮಕೂರು
ಮೆ|| ಕೆ.ಪಿ. ಪೂವಯ್ಯ, ಚಿಕ್ಕಮಗಳೂರು
ಕೆ.ಎನ್. ವಿಶ್ವೇಶ್ವರಯ್ಯ, ಚಿಕ್ಕಬಳ್ಳಾಪುರ
ಮಹಾಂತೇಶ ತುಮ್ಮರಗುದ್ದಿ, ಬಾಗಲಕೋಟೆ
ಬಾಣೂರು ಹಿರಣಯ್ಯ, ತರೀಕೆರೆ

ಬಸವ ಧರ್ಮ ಸಂಸತ್ ಸದಸ್ಯರು

ರಾಷ್ಟ್ರೀಯ ಬಸವ ದಳಗಳ ಸಂಘಟಕರು, ಸಂಚಾಲಕರು, ಸದಸ್ಯರೂ ಆದ ಶರಣ ಶರಣೆಯರು.

ಬಸವ ಧರ್ಮ ಪೀಠದ ದಾನಿಗಳಿಗೆ ಸತ್ಕಾರ

ಕಟ್ಟಡ ನಿಧಿಯ ದಾಸೋಹಿಗಳು

ಶರಣರುಗಳಾದ :

೧. ಜೆ. ರಾಜು, ಸಕಲಟ್ಟಿ
೨. ಗೌರಮ್ಮ ಮತ್ತು ಎ. ಎಂ. ಬಸವೇಗೌಡರು, ಚಿಕ್ಕಮಗಳೂರು
೩. ಮೆ|| ವಿಜಯಕುಮಾರ್‌ಸ್ವಾಮಿ, ಅಶೋಕಸ್ವಾಮಿ, ಉದಗೀರ
೪. ಶಾಂತಲಿಂಗಪ್ಪ ಎಸ್. ಪಾಟೀಲ, ಗುಲಬರ್ಗಾ
೫. ಗಣಂಗಳಪ್ಪ ಪಾಟೀಲ, ಗುಲಬರ್ಗಾ
೬. ಸಿದ್ಧರಾಮಪ್ಪ ಶಿವಶರಣಪ್ಪ ಬಾಳಪ್ಪಗೋಳ, ಗುಲಬರ್ಗಾ
೭. ವಿದ್ಯಾವತಿ ರವೀಂದ್ರನಾಥ ಬಿರಾದಾರ, ಏಕಲಾರ, ಬೀದರ
೮. ಬಸವಣ್ಣಪ್ಪ ಪಾಟೀಲ ನೀಲೂರು ಮತ್ತು
ಶಂಕರಪ್ಪ ಗುಂಡಪ್ಪ ಮಹಾಂತಗೋಳ, ಗುಲಬರ್ಗಾ
೯. ಆಶಾದೇವಿ ಸಿದ್ಧರಾಮಪ್ಪ ಖೂಬಾ, ಗುಲಬರ್ಗಾ
೧೦. ವಿಠ್ಠಲರಾವ ಹನುಮಂತಪ್ಪ ಅಗರಖೇಡ ಮತ್ತು
ಆನಂದರಾವ ಹನುಮಂತಪ್ಪ ಅಗರಖೇಡ, ಗುಲಬರ್ಗಾ
೧೧. ಗಂಗಮ್ಮ ಮತ್ತು ಜಿ. ಚನ್ನಯ್ಯ, ಚಿತ್ರದುರ್ಗ
೧೨. ರಾವ್ ಸಾಹೇಬ ಬಾಪೂಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
೧೩. ವಿಲಾಸ್ ಶಂಕರಪ್ಪ ಬಾಗಿ, ಗಡಹಿಂಗ್ಲಾಜ್
೧೪. ಚಂದ್ರಶೇಖರಪ್ಪ ವೀರಪ್ಪ ಕರವೀರಶೆಟ್ಟರು
ಮತ್ತು ಸಹೋದರರು, ಹುಬ್ಬಳ್ಳಿ
೧೫. ಮಲ್ಲಪ್ಪ ನೇವಡೆ ಮತ್ತು ಬಾಬೂರಾವ್ ಬೆಳಗುದರಿ, ಗಡಹಿಂಗ್ಲಾಜ್.
೧೬. ಕೆ. ಎಂ. ಹೇಮಯ್ಯ ಸ್ವಾಮಿ, ಕಂಪ್ಲಿ
೧೭. ಮೆ|| ಮಿತ್ರಾ ಫೈನಾನ್ಸ್ ಕಾರ್ಪೊರೇಷನ್, ಬೆಂಗಳೂರು

ಮೂರ್ತಿಗಳಿಗೆ, ಕಟ್ಟಡ ನಿಧಿಗೆ ನೀಡಿದ ದಾಸೋಹಿಗಳು

೧. ಶಿವಮ್ಮ ಎಂ. ವಿ ಚನ್ನಪ್ಪಶೆಟ್ಟಿ ಮತ್ತು ಮಕ್ಕಳು, ಮೂಗ್ತಿಹಳ್ಳಿ
೨. ಬಾಬೂರಾವ್, ರಾಮಣ್ಣ ಬಾಜ್ಜಿ, ಉದಗೀರ.
೩. ಲಕ್ಷ್ಮೀಬಾಯಿ ಪಂಡಾರೆ, ಉದಗೀರ
೪. ಎಸ್ ಆರ್. ಪಾಟೀಲ, ಕಂದಗುಳ, ಗುಲಬರ್ಗಾ
೫. ಸುಶೀಲಾ ಡಿ. ವಿ. ಪಾಟೀಲ, ಗುಲಬರ್ಗಾ
೬. ಅಮೃತಾ ಬಿ. ಎಸ್. ಹಳಕಟ್ಟಿ, ಗುಲಬರ್ಗಾ
೭. ಎಸ್. ಎನ್. ಪಾಟೀಲ, ಗುಲಬರ್ಗಾ
೮. ಸುಶೀಲಮ್ಮ ವೀರಭದ್ರಪ್ಪ ಸಾವಂತ್ರಿ, ಗದಗ
೧೦. ಶೋಭಾದೇವಿ ಕಾಶೀನಾಥ ಕಾಡಾದಿ, ಹಟ್ಟಿ
೧೧. ಬಾಬೂರಾವ್ ಈಶ್ವರಪ್ಪ ಬೆಳಗುದರಿ, ಗಡಹಿಂಗ್ಲಾಜ
೧೨. ಬಾಬೂ ಸಾಹೇಬ ರಾಮಚಂದ್ರ, ಗಡಹಿಂಗ್ಲಾಜ
೧೩. ಅಪ್ಪಾಸಾಹೇಬ ಶಿವಪುತ್ರಪ್ಪ ದಡ್ಡಿ, ಗಡಹಿಂಗ್ಲಾಜ
೧೪. ಶಿವಗೌಡ ಶಿವಮೂರ್ತಿ ಪಾಟೀಲ, ಗಡಹಿಂಗ್ಲಾಜ

೧೫. ಚಂಬಣ್ಣ ದುಂಡಪ್ಪ ಪಟ್ಟಣಶೆಟ್ಟಿ, ಗಡಹಿಂಗ್ಲಾಜ
೧೬. ವಿಜಯ ಬಾಬೂರಾವ್ ತೆಲಂಗ, ಗಡಹಿಂಗ್ಲಾಜ
೧೭. ಮದನಲಾಲ್ ರಾಜಕುಮಾರ್, ತಿಪಟೂರು
೧೮. ಎ.ಎನ್. ಶಿವರುದ್ರಯ್ಯ, ತಿಪಟೂರು
೧೯. ಸಿದ್ದಗಂಗಮ್ಮ ಮತ್ತು ಜಿ.ಕೆ. ಶಿವಸ್ವಾಮಿ, ತಿಪಟೂರು
೨೦. ಎಸ್.ಪಿ. ಗಂಗಾಧರಪ್ಪ, ತಿಪಟೂರು
೨೧. ಡಾ|| ಲಕ್ಷ್ಮೀದೇವಿ, ಬೆಂಗಳೂರು
೨೨. ಲೀಲಾವತಿ ಮತ್ತು ಶಿವರುದ್ರೇಗೌಡರು, ಬೆಂಗಳೂರು
೨೩. ಭಾರತಿ ಕೆಂಪಯ್ಯ, ಬೆಂಗಳೂರು
೨೪. ಗೌರಮ್ಮಜ್ಜಿ ಮಾದಪ್ಪ, ಬೆಂಗಳೂರು
೨೫. ಫಕೀರಪ್ಪ ಬಸಪ್ಪ ಕಲ್ಯಾಣಶೆಟ್ಟಿ, ಹುಬ್ಬಳ್ಳಿ
೨೬. ವೀರಭದ್ರಪ್ಪ ವಿರುಪಾಕ್ಷಪ್ಪ ಚಿಂದಿ, ಹುಬ್ಬಳ್ಳಿ
೨೭. ಹೆಚ್. ಸಿದ್ದಲಿಂಗಪ್ಪ ಸಿಂಪಿಗಲ್ಲಿ, ಹುಬ್ಬಳ್ಳಿ
೨೮. ಮೆ|| ಷಹಾ ದಾಮ್‌ಜಿ ಜಾಧವಜಿ ಹುಬ್ಬಳ್ಳಿ
೨೯. ಸಂಗಮ್ಮಬಾಯಿ ಮಲ್ಲಿಕಾರ್ಜುನ ತಮಾಕೆ, ಉದಗೀರ
೩೦. ಕಮಲಾಬಾಯಿ, ಉದಗೀರ, ಮಹಾರಾಷ್ಟ್ರ
೩೧. ಬಿ. ಶಿವಶಂಕರನ್, ಕೊಯಮತ್ತೂರು
೩೨. ರೇವತಿ ಮತ್ತು ಷಣ್ಮುಗಮ್, ಕೊಯಮತ್ತೂರು

ಶರಣಮೇಳದ ದಾಸೋಹದ ರೂ. 5000=00 ಪುದುವಟ್ಟಿಗೆ

೧. ಎಂ. ಸುಜಯಾದೇವಿ ಮಹಾಲಿಂಗಯ್ಯ, ತಿಪಟೂರು
೨. ನಿರ್ಮಲಾ ಮತ್ತು ಜಯದೇವ, ಬೆಂಗಳೂರು

ಇನ್ನಿತರ ಉದ್ದೇಶಗಳಿಗೆ ದಾಸೋಹ ಗೈದವರು

೧. ಕೆ.ಆರ್. ಸೋಮಶೇಖರ, ಬೆಂಗಳೂರು (ಗುರುಕಾಣಿಕೆ)
೨. ಗುರುಪುತ್ರಪ್ಪ ಜಿ. ದೊಡ್ಡವಾಡ, ಧಾರವಾಡ (ಗುರುಕಾಣಿಕೆ)
೩. ಶಶಿಕಲಾ ಮತ್ತು ಡಾ|| ಶರಣಪ್ಪ ಗಿರಿ, ಗುಲಬರ್ಗಾ (ಪುಸ್ತಕ ಪ್ರಟಕಣೆಗೆ)
೪. ಶಂಕರಪ್ಪ ಮಹಾಂತಗೋಳ, ಗುಲಬರ್ಗಾ (ಪುಸ್ತಕ ಪ್ರಕಟಣೆಗೆ)
೫. ಕೃಷ್ಣಪ್ಪ ಭರಮಪ್ಪ ಮೊಸಳೆ, ಗಡಹಿಂಗ್ಲಾಜ್ (ಮರಾಠಿ ಪ್ರಕಟಣೆಗೆ)
೬. ಮಹಾರಾಷ್ಟ್ರ ಲಿಂಗಾಯತ ಸೊಸೈಟಿ, ಮುಂಬಯಿ (ಮರಾಠಿ ಪ್ರಕಟಣೆಗೆ)
೭. ಶ್ರೀ ಸರ್ಪಭೂಷಣ ಶಿವಯೋಗಿಗಳ ಮಠದ ಟ್ರಸ್ಟ್, ಬೆಂಗಳೂರು (ಪು.ಪ್ರ)
೮. ಗಿರಿಜಮ್ಮ ಮತ್ತು ಸುಬ್ಬಣ್ಣ ಮೈಸೂರು, ಧಾರವಾಡ (ಪುಸ್ತಕ ಪ್ರಕಟಣೆಗೆ)
೯. ಲೀಲಾವತಿ ಮತ್ತು ಶಿವರುದ್ರೇಗೌಡರು, ಬೆಂಗಳೂರು (ಪುಸ್ತಕ ಪ್ರಕಟಣೆಗೆ)
೧೦. ಬಿ.ಎಸ್. ರುದ್ರಪ್ಪ, ಬಿದರೆ (ಪುಸ್ತಕ ಪ್ರಕಟಣೆಗೆ)
೧೧. ಶಾರದಾದೇವಿ ಶಿವನಾಗಪ್ಪ, ಗುಲಬರ್ಗಾ (ಪುಸ್ತಕ ಪ್ರಕಟಣೆಗೆ)

ವಿ.ಸೂ : 5000=00 ರೂಗಳಿಗಿಂತಲೂ ಮಿಕ್ಕಿ ಕೊಟ್ಟ ದಾಸೋಹಿಗಳಿಗೆ ಈಗ ಸತ್ಕಾರವಿದೆ. ಇನ್ನಿತರ ನಿಧಿಗಳಿಗೆ ಕೊಟ್ಟವರಿಗೆ ಸ್ಥಳೀಯವಾಗಿ ಆಶೀರ್ವದಿಸಲಾಗಿರುವುದು ಮತ್ತು ಪ್ರತಿ ತಿಂಗಳ ಕಲ್ಯಾಣ ಕಿರಣದಲ್ಲಿ ಪ್ರಕಟಿಸಿರಲಾಗುವುದು. 12-1-1991 ರಿಂದ 12-1-1992 ರ ಅವಧಿಯಲ್ಲಿ 5000 ರೂ ಕ್ಕಿಂತಲೂ ಹೆಚ್ಚು ಕೊಟ್ಟವರ ಹೆಸರು ಮರೆತಿದ್ದರೆ ನಮ್ಮ ಗಮನಕ್ಕೆ ತರಬೇಕು ಎಂದು ಆಶಿಸುವೆವು.

ಶರಣ ಮೇಳ - ಉದ್ಘಾಟನಾ ಸಮಾರಂಭ

ದಿ. 12-1-1992, ಭಾನುವಾರ ಮಧ್ಯಾಹ್ನ - 4-30

ಸನ್ನಿಧಿ : ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
(ಪೋಷಕಾಧ್ಯಕ್ಷರು, ಶರಣ ಮೇಳ ಉತ್ಸವ ಸಮಿತಿ)

ಉದ್ಘಾಟನೆ : ಶರಣ. ಎಸ್. ನಿಜಲಿಂಗಪ್ಪನವರು
(ಮಾಜಿ ಮುಖ್ಯಮಂತ್ರಿ, ರಾಷ್ಟ್ರನಾಯಕರು)

ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
(ಬಸವ ಧರ್ಮ ಪೀಠ, ಕೂಡಲ ಸಂಗಮ)

ಅಧ್ಯಕ್ಷತೆ : ಶರಣ. ಮಲ್ಲಿಕಾರ್ಜುನ ಪ್ರಸನ್ನ
(ಸಚಿವರು, ಸಣ್ಣ ನೀರಾವರಿ, ಕರ್ನಾಟಕ ಸರ್ಕಾರ)

ಭಿತ್ತಿಪಟ ಬಿಡುಗಡೆ : ಶರಣ. ಬಿ.ಎ. ದೇಸಾಯಿ
(ಅಧ್ಯಕ್ಷರು, ಜಿಲ್ಲಾ ಪರಿಷತ್, ಬಿಜಾಪುರ)

ಪುಸ್ತಕ ಬಿಡುಗಡೆ : ಶರಣ. ಜಿ.ಎಸ್. ಬಾಗಲಕೋಟ
(ಮಾಜಿ ಸಚಿವರು, ಜಮಖಂಡಿ)

ಪುಸ್ತಕ : ವಚನ ಸಂಗಮ (ಮರಾಠಿ ಆವೃತ್ತಿ)

ಧ್ವನಿ ಸುರುಳಿ ಬಿಡುಗಡೆ : ಶರಣ. ಬಿ.ವಿ. ಕಟ್ಟಿ
(ವಿಭಾಗೀಯ ಅಧಿಕಾರಿಗಳು, ಬೆಳಗಾಂವ)

ವಿಷಯ : ವಿಶ್ವಗುರು ಬಸವಣ್ಣನವರ ಸಮಗ್ರ ಜೀವನ

ಪುಸ್ತಕ ಬಿಡುಗಡೆ : ಶರಣ ಸಿ. ಸೋಮಶೇಖರ್, ಕೆ.ಎ.ಎಸ್.
(ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ) ಬೆಂಗಳೂರು ಜಿಲ್ಲೆ)

ಪುಸ್ತಕ : ವಿಶ್ವವಿಭೂತಿ ಬಸವಣ್ಣ

ವಿಶೇಷ ಆಹ್ವಾನಿತರು

ಶರಣ. ಎಸ್.ಎಂ. ನಾಗರಾಜ, ಸದಸ್ಯರು, ಜಿ.ಪ. ಚಿಕ್ಕಮಗಳೂರು
ಶರಣ. ಆರ್.ಆರ್. ಕಲ್ಲೂರು, ಶಾಸಕರು, ಇಂಡಿ
ಶರಣ. ಬಿ.ಎಸ್. ಪಾಟೀಲ, ಶಾಸಕರು, ಮನುಗೂಳಿ
ಶರಣ. ಬಿ.ಎಸ್. ಪಾಟೀಲ (ಸಾಸನೂರು), ಶಾಸಕರು, ಹೂವಿನಹಿಪ್ಪರಗಿ
ಶರಣ. ಬಸವರಾಜ ಪಾಟೀಲ, ಅಟ್ಟೂರು, ಬಸವ ಕಲ್ಯಾಣ
ಶರಣ. ಎಸ್.ಆರ್. ಕಾಶಪ್ಪನವರು, ಶಾಸಕರು, ಹುನಗುಂದ

ಬಸವ ಧರ್ಮದ ಮಹಾ ಜಗದ್ಗುರು ಪೀಠ ಸ್ಥಾಪನೆ

ಬಸವ ಧರ್ಮ ಪೀಠ (ರಿ. ಟ್ರಸ್ಟ್)

ಮಹಾಮನೆ ಮಹಾಮಠ, ಕೂಡಲ ಸಂಗಮ - 587115
ತಾ|| ಹುನುಗುಂದ, ಜಿಲ್ಲಾ|| ಬಿಜಾಪುರ.

ಬಸವ ಪೀಠವು ಎದ್ದು | ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು| ಧರೆಯವಗೆ
ವಶವಾಗದಿಹುದೆ ಸರ್ವಜ್ಞ?

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವತರಿಸಿ ಬಂದ ಮಾನವತಾವಾದಿ, ಮಹಾಗುರು, ಮಂತ್ರಪುರುಷ, ಸಮತಾವಾದಿ. ಮರ್ತ್ಯಲೋಕದ ಈ ಕರ್ತನ ಕಮ್ಮಟವನ್ನು ಸ್ವಾರ್ಥಿಯಾದ ಮಾನವ ಮತ್ತು ಪಟ್ಟಭದ್ರ ಹಿತಾಸಕ್ತರು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನನೊಂದು ಕರ್ತನ ಮೇಲಿನ ಅನನ್ಯವಾದ ಭಕ್ತಿಯಿಂದಲೂ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದಲೂ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿಯಿಂದಲೂ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಧರ್ಮವೇ ಸಾಧನ ಮತ್ತು ವಿಶ್ವಕಲ್ಯಾಣವೇ ಗುರಿ ಎಂದು ಭಾವಿಸಿದ ಅವರು ಇಷ್ಟಲಿಂಗವೆಂಬ ಕುರುಹನ್ನು, ಲಾಂಛನವನ್ನು ಯಾವುದೇ ಭೇದವಿಲ್ಲದೆ ಎಲ್ಲರಿಗೂ ಕೊಡುವಂತಹ ಧಾರ್ಮಿಕ ಸಮಾನತೆ-ಸ್ವಾತಂತ್ರ್ಯಗಳನ್ನು ಘೋಷಿಸಿದರು. ಇಷ್ಟ ಲಿಂಗವೆಂಬ, ವಿಶ್ವದಾಕಾರದಲ್ಲಿ ವಿಶ್ವಾತ್ಮನನ್ನು ಭಾವಿಸುವ ಶ್ರೇಷ್ಠ ಲಾಂಛನವನ್ನು ಕಂಡುಹಿಡಿದು ಕೊಟ್ಟು **"ಲಿಂಗವಂತ ಧರ್ಮ"** ದ ಆದ್ಯರಾದರು. ಆ ವರೆಗೂ ಜಗತ್ತು ಕಂಡರಿಯದ ಕೇಳರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯು ಜನಸಾಮಾನ್ಯರ ಮನೆ-ಮನಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟಪವೆಂಬ ಮಾದರಿ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ, ಧಾರ್ಮಿಕ ತರಬೇತಿ ನೀಡಿದರು. ಶತಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪುನೀತರಾದರು. ವಿಶ್ವ ಸಂಸ್ಥೆಯು ಸಮಸ್ತ ಮಾನವ ಕುಲಕೋಟಿಯ ಸಮಸ್ಯೆಗಳನ್ನು ಕುರಿತು ಚಿಂತನೆಗೈಯುವಂತೆ ಅನುಭವ ಮಂಟಪವು ಮಾನವ ಸಮಾಜದ ಸಮಸ್ಯೆಗಳನ್ನು ಚಿಂತಿಸಿತಲ್ಲದೆ ಉತ್ತಮ ಪರಿಹಾರ ನೀಡಿತು. ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವವೆನಿಸುವ ಶರಣ ಸಂದೋಹ ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣದಲ್ಲಿ ವಿಜೃಂಭಿಸಿತು. ವಿಶ್ವಗುರು ಬಸವಣ್ಣನವರ

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಅವತರಿಸಿದ ನಮ್ಮ ಬಸವಣ್ಣ - ಅಲ್ಲಮಪ್ರಭು

ಉದಾತ್ತ ಉದ್ದೇಶದ ಕಾರ್ಯಾಚರಣೆಗೆ ಹೆಗಲೆಣೆಯಾಗಿ ದುಡಿಯಲು ಭಾರತದ ಮೂಲೆ ಮೂಲೆಗಳಿಂದ ಜನರು ಧಾವಿಸಿದರು. ಉದಾತ್ತ ಚಿಂತನೆ, ಉನ್ನತವಾದ ತ್ಯಾಗಗಳಿಂದ ಅಮರಾತ್ಮರಾದರು. ಇಷ್ಟೇ ಅಲ್ಲ - ವಚನ ಸಾಹಿತ್ಯ ಸಂವಿಧಾನಕ್ಕೆ ಜಾತಿವಾದಿಗಳಿಂದ ಸಂಕಷ್ಟವೆರಗಿದಾಗ ಪ್ರಾಣಾರ್ಪಣೆಗೂ ಸಿದ್ಧರಾದರು.

ಗುರು ಬಸವಣ್ಣನವರು ಯಾವುದೇ ಒಂದು ಜಾತಿ ಮತಕ್ಕೆ ಸೀಮಿತರಾದ ವ್ಯಕ್ತಿಯಲ್ಲ; ಅವರು ಒಂದು ಜಾತಿಯನ್ನು ನಿರ್ಮಿಸಲೂ ಯತ್ನಿಸಿಲ್ಲ. ಸಮಸ್ತ ಮಾನವ ಜನಾಂಗಕ್ಕೆ ದೇವರು-ಧರ್ಮ-ಪೂಜೆಯ ಹಕ್ಕನ್ನು, ಸಮಬಾಳ್ವೆಯ ಸೌಲಭ್ಯವನ್ನೂ ಒದಗಿಸಲು ಶ್ರಮಿಸಿದ ಮಹಾಮಾನವತಾವಾದಿ. ಜಾತಿ ವರ್ಣ ವರ್ಗ ಲಿಂಗ ಭೇದಗಳಿಲ್ಲದ "ಕಲ್ಯಾಣ ರಾಜ್ಯ" ನಿರ್ಮಾಣಕ್ಕೆ, ವಿಶ್ವಚೇತನವನ್ನು ಚುಳುಕಾಗಿ ಮಾಡಿಕೊಂಡು ಇಷ್ಟಲಿಂಗ ರೂಪದಲ್ಲಿ ಅಂಗದ ಮೇಲೆ ಧರಿಸಿದ "ಲಿಂಗವಂತ"ರು (ದೇವ ಭಕ್ತರು) ಸ್ವಯಂ ಸೇವಕರಾಗಿ ದುಡಿಯಬೇಕು ಎಂಬುದೇ ಬಸವಣ್ಣನವರ ಆಶೋತ್ತರವಾಗಿತ್ತು. ಅನುಭವ ಮಂಟಪದ ಮಾದರಿಯಲ್ಲಿ ಧರ್ಮ ಸಂಸ್ಥೆಗಳು ಜನರನ್ನು ಸಂಘಟಿಸುವ, ಸಂಸ್ಕರಿಸುವ ಜ್ಞಾನಕೇಂದ್ರಗಳಾಗಬೇಕು ಎಂಬುದೇ ಗುರು ಬಸವಣ್ಣನವರ ಕನಸಾಗಿತ್ತು.

ಆದರೆ, ಆದುದೇನು? ಆ ಗುರುವಿನ ಹೃದ್ಗತ ಕನಸುಗಳನ್ನು ನಂತರದ ಅನುಯಾಯಿಗಳು ನನಸು ಮಾಡಲಿಲ್ಲ. ಅವರು ನಡೆದು ತೋರಿದ ಪಥವನ್ನು ಸರಿಯಾಗಿಡಲಿಲ್ಲ. ಮಹಾ ಮಾನವತಾವಾದಿಯಾದ ಬಸವ ಗುರುವು ಎಲ್ಲರನ್ನೂ ಮಾತೃಹೃದಯದಿಂದ ಸ್ವಾಗತಿಸಿದಂತೆ ನಂತರದವರು ಸ್ವಾಗತಿಸಲಿಲ್ಲ. ಹೀಗಾಗಿ ಸಂಪೂರ್ಣವಾಗಿ ವಿಕೃತಗೊಂಡ ಸಮಾಜವನ್ನಿಂದು ಕಾಣುತ್ತಿದ್ದೇವೆ. ಧರ್ಮಗುರು ಬಸವಣ್ಣನವರ ವಿಚಾರಕ್ಕೆ ವಿರುದ್ಧವಾದ, ವಚನ ಸಾಹಿತ್ಯ ಸಂವಿಧಾನ ಮನ್ನಿಸದ, ಶರಣ ಪಥಕ್ಕೆ ಸಲ್ಲದ ನಡೆ-ನುಡಿ, ಭೇದ-ಭ್ರಾಂತಿ, ಅಜ್ಞಾನ-ಮೌಢ್ಯತೆಗಳಿಂದ ತುಂಬಿರುವ ಅನುಯಾಯಿಗಳನ್ನೇ ಹೆಚ್ಚಾಗಿ ಕಾಣುತ್ತೇವೆ. ಇದು ಸರಿಯೆ? ಆದ್ದರಿಂದ ಎಲ್ಲರೂ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ. ಹಳಿ ತಪ್ಪಿದ ಈ ಸಮಾಜದ ಗಾಡಿಯನ್ನು ಹಳಿಯ ಮೇಲೆ ಕೂಡ್ರಿಸುವ ಪ್ರಾಮಾಣಿಕ ಪ್ರಯತ್ನವನ್ನಿಂದು ಮಾಡಬೇಕಾಗಿದೆ.

ಶ್ರೀಗುರುಬಸವ ತಂದೆಯ ದಿವ್ಯ ಪ್ರೇರಣೆಯಂತೆ ಇದೀಗ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವೊಂದನ್ನು ಬಸವ ಶಕೆ 886, ಸೋಮವಾರ 13-1-1992 ರಂದು ಸಂಸ್ಥಾಪನೆ ಮಾಡಲಾಗುತ್ತಿದೆ. ಇದರ ಉದ್ದೇಶ, ಬಸವ ತತ್ತ್ವ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಲಿಂಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಪ್ರಥಮ ಪೀಠಾಧೀಶರಾಗುತ್ತಿರುವ



ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರು

ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ 15-9-1931 ರಂದು ಜನಿಸಿ, ಬಿ.ಎ. ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ 25-4-1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ ದಾಸೋಹ ಮಾಡುತ್ತಿರುವ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರವಚನಗಳ ಮೂಲಕ ಮಾತ್ರವಲ್ಲ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ. ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವ ತತ್ವದ ಬೀಜಗಳನ್ನು ಬಿತ್ತಿ, 'ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು ಒತ್ತಿಹಿಂಡಿದರೆ ಭಕ್ತಿ ಎಂಬ ರಸ' ಎಂಬ ವಾತಾವರಣ ನಿರ್ಮಾಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ.

ಪೂರ್ವಭಾವಿ ಕಾರ್ಯಕ್ರಮ

ದಿ. 13-1-1992 ಸೋಮವಾರ

ಸುಪ್ರಭಾತದಲ್ಲಿ ಶ್ರೀ ಬಸವೇಶ್ವರ ಪೂಜಾವ್ರತ — ಬೆಳಗ್ಗೆ 6 ಗಂಟೆಗೆ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರಿಂದ

ಕೂಡಲ ಮುಖಿಯಲ್ಲಿರುವ ಶ್ರೀ ಬಸವೇಶ್ವರ ಐಕ್ಯ ಮಂಟಪ ಮತ್ತು ಶ್ರೀ ಸಂಗಮೇಶ್ವರ ದೇವಾಲಯ ಸಂದರ್ಶನ, ಅಲ್ಲಿಂದ 9-00 ಕ್ಕೆ ಜೀಪಿನಲ್ಲಿ ಶ್ರೀಗಳ ಮೆರವಣಿಗೆ, ಪಾದಯಾತ್ರೆಯಲ್ಲಿ ಶರಣರ ಪಥ ಸಂಚಲನ, ಮಹಾಮನೆಗೆ ಆಗಮನ.

ಬಸವ ಧ್ವಜಾರೋಹಣ : ಶರಣ. ಸಿದ್ದೂ ನ್ಯಾಮಗೌಡರು
(ಸಚಿವರು, ಕೇಂದ್ರ ಸರ್ಕಾರ)

ಬಸವ ಧರ್ಮ ಪೀಠಾರೋಹಣ ಸಮಾರಂಭ

ಬಸವ ಶಕೆ 886 — ಸಮಯ : ಬೆಳಗ್ಗೆ 10-30

ದಿ.13-1-1992, ಸೋಮವಾರ — ಮಹಾಮನೆ ಮಹಾಮಠ

ಪರಮ ಪೂಜ್ಯ ಶ್ರೀಶ್ರೀ
ಸದ್ಗುರು ಲಿಂಗಾನಂದ ಮಹಾಸ್ವಾಮೀಜಿ
ಅವರಿಂದ

ಸನ್ನಿಧಿ : ಪೂಜ್ಯ ಶ್ರೀ ನಿ. ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಟೇಕಿನ ಮಠ, ಬಾಗಲಕೋಟ
ಪೂಜ್ಯ ಶ್ರೀ ಗುರುಪರದೇಶೀಕೇಂದ್ರ ಮಹಾಸ್ವಾಮಿಗಳು
ಕೆರಗೋಡು ರಂಗಾಪುರ, ತಾ-ತಿಪಟೂರು
ಪೂಜ್ಯ ಶ್ರೀ ನಿ. ಪ್ರ. ಶಿವಲಿಂಗ ಸ್ವಾಮಿಗಳು
ತಣ್ಣೀರು ಹಳ್ಳಮಠ, ಹಾಸನ
ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು
ಬಸವ ಮಂದಿರ ಚಿಕ್ಕಮಗಳೂರು
ಪೂಜ್ಯ ಶ್ರೀ ಕಾಲಾಗ್ನಿ ರುದ್ರಮುನಿ ಸ್ವಾಮಿಗಳು
ಮರಳೇಗವಿ ಮಠ, ಕನಕಪುರ
ಪೂಜ್ಯ ಶ್ರೀ ಆದಿ ದೇವಾನಂದ ಸ್ವಾಮಿಗಳು
ಕೈಲಾಸಾಶ್ರಮ, ತುಮಕೂರು
ಪೂಜ್ಯ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು
ಹಿರೇಮಠ ಸಂಸ್ಥಾನ, ಭಾಲ್ಕಿ
ಪೂಜ್ಯ ಶ್ರೀ ನಿ. ಪ್ರ. ಶಿವಾನಂದ ಸ್ವಾಮಿಗಳು
ಗುರುಬಸವೇಶ್ವರ ಸಂಸ್ಥಾನಮಠ, ಹುಲಸೂರು
ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
(ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ)

ಪೀಠಾರೋಹಣ ಅಭಿನಂದನ ಕಾರ್ಯಕ್ರಮ

ಸನ್ನಿಧಿ	:	ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು (ಬಸವ ಧರ್ಮ ಪೀಠಾಧೀಶ, ಕೂಡಲಸಂಗಮ)
ಅಧ್ಯಕ್ಷತೆ	:	ಶರಣ ಬಿ. ಆರ್. ಪಾಟೀಲ (ಉಪಸಭಾಪತಿ, ವಿಧಾನ ಪರಿಷತ್ತು)
ಉದ್ಘಾಟನೆ	:	ಶರಣ ಸಿದ್ದೂ ನ್ಯಾಮಗೌಡರು (ಕೇಂದ್ರ ಸಚಿವರು, ಕಲ್ಲಿದ್ದಲು-ಗಣಿ ಖಾತೆ)
ಅಭಿನಂದನ ಭಾಷಣ	:	ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ (ಬಸವ ಧರ್ಮ ಪೀಠ, ಕೂಡಲ ಸಂಗಮ)
ಗ್ರಂಥ ಬಿಡುಗಡೆ	:	ಶರಣೆ. ಬಸವರಾಜೇಶ್ವರಿ (ಲೋಕಸಭಾ ಸದಸ್ಯೆ, ಬಳ್ಳಾರಿ)
ಗ್ರಂಥ	:	ಲಿಂಗಾಯತ ಧರ್ಮ ಕೈಪಿಡಿ
ರಚನೆ	:	ಪೂಜ್ಯ ಮಾತಾಜಿ
ಬಿನ್ನವತ್ತಳೆ ಸಮರ್ಪಣೆ	:	ಶರಣ. ಡಿ.ಎಂ. ಚಂದ್ರಶೇಖರ (ನಿ. ಹೈಕೋರ್ಟ್ ಮುಖ್ಯ ನ್ಯಾಯಾಧೀಶರು, ಬೆಂಗಳೂರು)
ಗುರುವಂದನ	:	ಕುಮಾರಿ ಶೃತಿ ಕೆ. ಎಂ. ಭಟ್, ಸಿದ್ಧಾಪುರ
ಫಲ-ಪುಷ್ಪ ಸಮರ್ಪಣೆ	:	ಶರಣ. ಕೆ. ಆರ್. ಸೋಮಶೇಖರ್ (ಉದ್ದಿಮೆದಾರರು, ಬೆಂಗಳೂರು)
ಉಪನ್ಯಾಸ	:	ಶರಣ. ಸಿ. ಸೋಮಶೇಖರ್ (ವಿಶೇಷ ಜಿಲ್ಲಾಧಿಕಾರಿಗಳು (ಅಭಿವೃದ್ಧಿ) ಬೆಂಗಳೂರು)
ವಿಷಯ	:	ಇಂದಿನ ಜಗತ್ತಿಗೆ ಬಸವ ತತ್ತ್ವದ ಅಗತ್ಯ

ಅಭಿನಂದನೆ ಸಲ್ಲಿಸಲಿರುವ ಗಣ್ಯರು:

ಶರಣ. ಎಸ್. ಶರಣಪ್ಪ, ಚಳ್ಳಕೆರೆ
ಶರಣ. ಎ. ಎಂ. ಬಸವೇಗೌಡರು, ಚಿಕ್ಕಮಗಳೂರು
ಶರಣ. ಎಂ. ಕೆ. ಮಲ್ಲಯ್ಯರಾಜ್, ಭವಾನಿ
ಶರಣ. ಆರ್ ಬಿ. ಹೆಬ್ಬಳ್ಳಿ, ಬಾಂಬೆ
ಶರಣ. ಎಸ್ ಬಿ. ಪಾಟೀಲ್, ಗುಲಬರ್ಗಾ
ಶರಣ. ಎಸ್. ಎಸ್. ಪಾಟೀಲ್, ಗುಲಬರ್ಗಾ
ಶರಣ. ಪರ್ವತಪ್ಪ ಕೋರವಾರ, ಹೈದರಾಬಾದ
ಶರಣ. ಗದಿಗೆಪ್ಪ ದೇಶನೂರು, ಬೈಲಹೊಂಗಲ
ಶರಣ. ಟಿ. ಎಸ್. ಕರಿಬಸಯ್ಯ, ಬೆಂಗಳೂರು
ಶರಣ. ಆರ್. ಎಂ. ಬಿ. ಆರಾಧ್ಯ, ಬೆಂಗಳೂರು
ಶರಣ. ಎಸ್. ಪುಟ್ಟಸಿದ್ಧಪ್ಪ, ಬೆಂಗಳೂರು
ಶರಣ. ರಾಜಶೇಖರ ಮಡಕಿ, ಸೊಲ್ಲಾಪುರ
ಶರಣ. ಬಾಪೂಸಾಹೇಬ ರಾವ್ ಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
ಶರಣ. ವಿಲಾಸ ಶಂಕರಪ್ಪ ಬಾಗಿ, ಗಡಹಿಂಗ್ಲಾಜ್
ಶರಣ. ಜೆ. ರಾಜು, ಸಕಲಟ್ಟಿ, ತಮಿಳುನಾಡು
ಶರಣ. ಗುರುಬಸಪ್ಪ ಕಾಟೀರಿ, ತಮಿಳುನಾಡು

ಷಟ್‌ಸೂತ್ರಗಳನ್ನು ಸಮರ್ಪಿಸಲಿರುವವರು :
ಶರಣ ಬಸವ ಕುಮಾರ್ ಪಾಟೀಲ, ಬೀದರ
ಶರಣ. ಟಿ. ಎ. ದಾಸಪ್ಪ, ತಿಪಟೂರು
ಶರಣ. ಬಾಣೂರು ಚನ್ನಪ್ಪ, ಚಿಕ್ಕಮಗಳೂರು
ಶರಣೆ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಶರಣೆ. ಸರೋಜಮ್ಮ ನಾಗರಾಜು, ಮೈಸೂರು

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ ಸತ್ಕಾರ

ಬಸವ ಧರ್ಮ ಪೀಠಾಧೀಶ

ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ
ದಿವ್ಯ ಹಸ್ತದಿಂದ

ಶರಣ. ಪದ್ಮಶ್ರೀ ಆರ್. ಎಂ. ಬಿ. ಆರಾಧ್ಯ
(ವಾಣಿಜ್ಯೋದ್ಯಮಿ, ಕಂಟ್ರಾಕ್ಟರ್.)
ಶರಣ. ಎಸ್. ಪರಮೇಶ್ವರಪ್ಪ ಐ. ಎಫ್. ಎಸ್.
(ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು)
ಶರಣ. ಬ್ರಿಗೇಡಿಯರ್. ಜಿ. ಎಂ. ಎಸ್. ತುಳ್ಳಪ್ಪ (ವಿ.ಸೇ.ಪ. ವಿಜೇತರು)
(ಕರ್ನಾಟಕ ಭೂ ಸೇನಾ ನಿಗಮ (ನಿ) ಚೇರ್ಮನ, ಬೆಂಗಳೂರು)
ಶರಣ. ಕೆ. ಎಂ. ನಂಜಪ್ಪ
(ಮಾಜಿ ಮೇಯರ್, ಬೆಂಗಳೂರು)
ಶರಣ. ಗಣಂಗಳಪ್ಪ ಪಾಟೀಲ
(ವಾಣಿಜ್ಯೋದ್ಯಮಿ ಮತ್ತು ದಾಸೋಹಿ, ಗುಲಬರ್ಗಾ)
ಶರಣ. ಶಾಂತಲಿಂಗಪ್ಪ ಪಾಟೀಲ
(ವಾಣಿಜ್ಯೋದ್ಯಮಿ ಮತ್ತು ದಾಸೋಹಿ, ಗುಲಬರ್ಗಾ)
ಶರಣ. ಜೆ. ರಾಜು, ಸಕಲಟ್ಟಿ
(ಟೀ ಪ್ಲಾಂಟರ್ಸ್ ಮತ್ತು ದಾಸೋಹಿ, ತಮಿಳುನಾಡು)
ಶರಣ. ಡಾ|| ಬಸವರಾಜ, ಆಲೂರು, ಗದಗ
(ಎಫ್. ಆರ್. ಸಿ. ಎಸ್. ಇಗ್ಲೆಂಡ್ ಮತ್ತು ಜರ್ಮನಿ)
ಶರಣ. ಡಾ|| ಸಿ. ಎಸ್. ಪುರಾಣಮಠ, ರಾಣೇಬೆನ್ನೂರು
(ದಂತ ವೈದ್ಯರು - ಆದರ್ಶ ಬಸವ ತತ್ತ್ವ ಪ್ರಚಾರಕರು)
ಶರಣ. ಎಸ್. ಎಸ್. ಶೆಟ್ಟರ್
(ಮಾಜಿ ಮೇಯರ್, ಮತ್ತು ಗಣ್ಯ ವಕೀಲರು, ಹುಬ್ಬಳ್ಳಿ)

ಐದನೆಯ ಶರಣ ಮೇಳದ ಸಂದರ್ಭದಲ್ಲಿ ಸತ್ಕರಿಸಲ್ಪಡುವ ಈ ಮಹನೀಯರಿಗೆ ಅನುಕೂಲವಾದ ದಿನಾಂಕ, ಸಮಯ ನೋಡಿಕೊಂಡು ಸತ್ಕರಿಸಲಾಗುತ್ತದೆ.

ಶರಣ ಬಂಧುಗಳಿಗೆ ವಿಶೇಷ ಸೂಚನ :

1991 ರಲ್ಲಿ ನಡೆದ ಶರಣ ಮೇಳದಲ್ಲಿ ದಿ. 12-1-1991 ರಂದು ವಿಶೇಷವಾದ ಸಾಮೂಹಿಕ ಇಷ್ಟಲಿಂಗ ಪೂಜೆಯ ಚಿತ್ರೀಕರಣ ಮಾಡಲಾಯಿತು. VHS ದಲ್ಲಿ ಆಗ ಚಿತ್ರೀಕರಿಸಲಾಯಿತು. ಯೂ ಮ್ಯಾಟಿಕ್‌ದಲ್ಲಿ ಚಿತ್ರೀಕರಿಸುವ ಹಂಬಲವಿದ್ದರೂ ಅದರ ಖರ್ಚು ಬಹಳವಾದುದರಿಂದ ಅನಿವಾರ್ಯವಾಗಿ ವಿಹೆಚ್‌ಎಸ್‌ದಲ್ಲಿ ಮಾಡಿದೆವು. ಬಹಳ ದಿವಸಗಳ ಕಾಲ ಇಟ್ಟು ಉಪಯೋಗಿಸಲು ಅದು ಬಾರದ್ದರಿಂದಲೂ, ಮತ್ತು ಪ್ರತಿಗಳನ್ನು ತೆಗೆಯುತ್ತ ಹೋದಾಗ ಮಾತೃಪ್ರತಿಯು ದುರ್ಬಲವಾಗುವುದರಿಂದಲೂ, ಈ ಕೆಸೆಟ್ಟಿಗೆ ಬೇಡಿಕೆ ಬಹಳವಿರುವುದರಿಂದ ಈಗ ಯೂ ಮ್ಯಾಟಿಕ್‌ದಲ್ಲಿ ಕೆಲವು ದೃಶ್ಯಗಳನ್ನು (ಶಾಟ್ಸ್) (ಕೆಮರಾವನ್ನು ತರಿಸುತ್ತಿರುವ ಕಾರಣ) ತೆಗೆದುಕೊಂಡು ನಂತರ ಬಾಕಿ ದೃಶ್ಯ ಸೇರಿಸಲಾಗುವುದು. ಇದಕ್ಕೆ ಶರಣ ಸಮೂಹದ ಅಗತ್ಯವಿದೆ. ಆದ್ದರಿಂದ ಬೇಗಬೇಗನೆ ಸಮಯದ ಉಪಯೋಗ ಮಾಡಿಕೊಳ್ಳಬೇಕು. ಕೇವಲ ಅರ್ಧಗಂಟೆಯಲ್ಲಿ ಚಿತ್ರೀಕರಣವನ್ನು ಮುಗಿಸಲಾಗುವುದು. ಬಿಳಿ ಸಮವಸ್ತ್ರ, ಸ್ಕಾರ್ಫ್, ಪೂಜಾ ಸಾಮಗ್ರಿಗಳೊಡನೆ ಶರಣ ಬಂಧುಗಳು ಸಭಾ ಮಂಟಪಕ್ಕೆ ಬರಬೇಕು. ನಂತರ ಮಕ್ಕಳ ಗೋಷ್ಠಿ.

ಶರಣ ಮೇಳ - ಮಕ್ಕಳ ಗೋಷ್ಠಿ

ದಿ. 13-1-1992, ಸೋಮವಾರ — ವೇಳೆ ಮಧ್ಯಾಹ್ನ 4-30

ಪ್ರಾರ್ಥನೆ	:	ಕುಮಾರಿ ಬಸವಶ್ರೀ, ಬೆಂಗಳೂರು
ಸ್ವಾಗತ	:	ಕುಮಾರಿ ಶೋಭಾ, ಕೂಡಲಸಂಗಮ
ಅಧ್ಯಕ್ಷತೆ	:	ಕುಮಾರಿ ವಚನ ಸುಧಾ, ಚಿತ್ರದುರ್ಗ
ಉದ್ಘಾಟನೆ	:	ಕುಮಾರಿ ಶ್ರುತಿ ಕೆ. ಎಂ. ಭಟ್, ಸಿದ್ದಾಪುರ
ಮುಖ್ಯ ಅತಿಥಿ	:	ಕುಮಾರಿ ಪುನೀತ ನಂಜುಂಡಪ್ಪ, ದಾವಣಗೆರೆ
ನೃತ್ಯಾಭಿನಯ	:	ಕುಮಾರಿ ಕೆ. ಎಂ. ರೋಹಿಣಿ ಹೇಮಯ್ಯಸ್ವಾಮಿ, ಕಂಪ್ಲಿ ಕುಮಾರಿ ಶ್ರುತಿ ಕೆ. ಎಂ. ಭಟ್, ಸಿದ್ದಾಪುರ ಕುಮಾರಿಯರಾದ ಶೀಲಾ, ವಾಣಿ, ಕಲ್ಪನಾ, ಲಕ್ಷ್ಮಿ ಸುಗ್ಗಲಾದೇವಿ, ಗಂಗಾಂಬಿಕೆ, ಶಿವಮೊಗ್ಗ ಕುಮಾರಿ. ಆರತಿ ಅಡಿಕಿಹಾಳ, ಬಾಗಲಕೋಟೆ ಕುಮಾರಿ. ಸೌಮ್ಯ ವಿಶ್ವೇಶ್ವರಯ್ಯ, ಚಿಕ್ಕಬಳ್ಳಾಪುರ ಕುಮಾರಿ ಕಲ್ಪನಾ ಮುನವಳ್ಳಿ, ಹುಬ್ಬಳ್ಳಿ
ಉಪನ್ಯಾಸಗಳು	:	ಕುಮಾರಿ ಜ್ಯೋತಿ ಗಂಗಾಧರ, ಬಾಗಲಕೋಟೆ ಕುಮಾರಿ. ಬಸವಶ್ರೀ, ಬೆಂಗಳೂರು
ಸಮೂಹಗೀತೆ	:	ಅರ್ಚನಾ, ಶೋಭಾ, ಮುಕ್ತಾಯಕ್ಕ ಗಂಗಾಂಬಿಕೆ, ನಾಗರತ್ನ, ಬಸವಶ್ರೀ, ಮಂಜುಳಾ, ಸುನೀತ, ಚೆನ್ನಾಂಬಿಕೆ, ಬಸವಚಂದ್ರಿಕೆ
ನಿರ್ದೇಶನ	:	ಸೋದರಿ ಶಿವಗೀತಾ
ಹೊಣೆಗಾರಿಕೆ	:	ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ

ಶರಣ ಮೇಳ - ಧರ್ಮ ಚಿಂತನ ಗೋಷ್ಠಿ

ದಿ. 13-1-1992, ಸೋಮವಾರ — ರಾತ್ರಿ 7 ಗಂಟೆಗೆ

ಸನ್ನಿಧಿ	:	ಪೂಜ್ಯ ಶ್ರೀ ನಿ. ಪ್ರ. ಶಿವಲಿಂಗ ಸ್ವಾಮಿಗಳು (ತಣ್ಣೀರು ಹಳ್ಳ ಮಠ, ಹಾಸನ)
ಅಧ್ಯಕ್ಷತೆ	:	ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು (ಬಸವ ಮಂದಿರ, ಚಿಕ್ಕಮಗಳೂರು)
ಉದ್ಘಾಟನೆ	:	ಶರಣ. ಪದ್ಮಭೂಷಣ ಡಾ. ಎಂ. ಸಿ. ಮೋದಿ (ಅಂತರರಾಷ್ಟ್ರ ಖ್ಯಾತಿಯ ನೇತ್ರ ತಜ್ಞರು, ಬೆಂಗಳೂರು)
ಉಪನ್ಯಾಸಗಳು	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ) ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು (ಹಿರೇಮಠ ಸಂಸ್ಥಾನ, ಭಾಲ್ಕಿ) ಪೂಜ್ಯ ಶ್ರೀ ವೀರಮಹಾಂತೇಶ್ವರ ಸ್ವಾಮಿಗಳು (ಶಿವಪ್ಪಯ್ಯನ ಮಠ, ನೀಲಗುಂದ) ಶರಣ. ಮೇಜರ್ ಪೂವಯ್ಯ (ನಿವೃತ್ತ ಸೈನ್ಯಾಧಿಕಾರಿಗಳು, ಚಿಕ್ಕಮಗಳೂರು)
ಪುಸ್ತಕ ಬಿಡುಗಡೆ	:	ಶರಣ. ಪರ್ವತಪ್ಪ ಕೋರವಾರ (ಹೈದರಾಬಾದ್, ಆಂಧ್ರಪ್ರದೇಶ)
ಪುಸ್ತಕ	:	"ಶ್ರೀ ಬಂಡಾರು ತಮ್ಮಯ್ಯ ಶತಜಯಂತಿ ಸ್ಮರಣ ಸಂಚಿಕೆ"
ಪುಸ್ತಕ ಪರಿಚಯ	:	ಶರಣ. ಶಿವಶ್ರೀ ನಾಗಲಿಂಗ ಶಿವಯೋಗಿ (ವಿಶ್ವಲಿಂಗಾಯತ ಪರಿಷತ್, ಮಹಬೂಬನಗರ)
ಪುಸ್ತಕ ಬಿಡುಗಡೆ	:	ಶರಣೆ. ವೈಶಾಲಿ ವಿಲಾಸ ಬಾಗಿ (ಗಡಹಿಂಗ್ಲಾಜ್, ಮಹಾರಾಷ್ಟ್ರ)
ಪುಸ್ತಕ	:	ವಿಶ್ವಗುರು ಬಸವಣ್ಣ ಸಮಗ್ರ ಚರಿತ್ರೆ (ಮರಾಠಿ ಆವೃತ್ತಿ)
ಆಶೀರ್ವಚನ	:	ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು

ಶರಣ ಮೇಳ - ಬಸವ ಕ್ರಾಂತಿ ದಿನಾಚರಣೆ

ದಿ. 14-1-1992 ಮಂಗಳವಾರ ಬೆಳಿಗ್ಗೆ 9 ಗಂಟೆಗೆ

ಶ್ರೀ ಬಸವೇಶ್ವರ ಐಕ್ಯ ಮಂಟಪದಲ್ಲಿ ಪೂಜೆ
ಪ್ರತಿಜ್ಞಾವಿಧಿ, ಪಾದಯಾತ್ರೆ, ಪಥ ಸಂಚಲನ,
ವಚನ ವಾಙ್ಮಯ ಮೆರವಣಿಗೆ

ಧ್ವಜಾರೋಹಣ : ಶರಣ. ರಾವ್ ಸಾಹೇಬ ಬಾಪೂಸಾಹೇಬ ಕಿತ್ತೂರಕರ
(ಗಡಹಿಂಗ್ಲಾಜ, ಮಹಾರಾಷ್ಟ್ರ)

ಸಮುದಾಯ ಪ್ರಾರ್ಥನಾ ಸಭೆ ಬೆಳಿಗ್ಗೆ 10-30

ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಅಧ್ಯಕ್ಷತೆ : ಶರಣೆ. ಬಸವರಾಜೇಶ್ವರಿ
(ಲೋಕಸಭಾ ಸದಸ್ಯೆ, ಬಳ್ಳಾರಿ)
ಉದ್ಘಾಟನೆ : ಶರಣ. ಸಿ. ಎಸ್. ಅಪ್ಪಾಜಿ ನಾಡಗೌಡರು
(ಸಚಿವರು, ಕಾರ್ಮಿಕ ಖಾತೆ, ಕರ್ನಾಟಕ ಸರ್ಕಾರ)

ಬಸವ ಭಾವಚಿತ್ರ
ಅನಾವರಣ : ಶರಣೆ. ಸುವರ್ಣ ಸಿ. ಎಸ್. ನಾಡಗೌಡರು

ಸಮುದಾಯ ಪ್ರಾರ್ಥನಾ ನಿರ್ವಹಣೆ

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಬೆಂಗಳೂರು
೨. ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು, ಕೂಡಲಸಂಗಮ
೩. ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
೪. ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ, ಧಾರವಾಡ
೫. ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
೬. ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು, ಹುಲ್ಸೂರು

ಮುಖ್ಯ ಅತಿಥಿಗಳು : ಶರಣೆ. ಸುಮನ್ ಶರತ್ ಕೋಲಾರ
(ಉಪಾಧ್ಯಕ್ಷೆ, ಜಿಲ್ಲಾ ಪರಿಷತ್ತು, ಬಿಜಾಪುರ)
ಶರಣ. ಎಸ್. ಆರ್. ಪಾಟೀಲ
(ವಿರೋಧ ಪಕ್ಷ ನಾಯಕರು. ಜ.ಪ. ಬಿಜಾಪುರ)
ಶರಣ. ಡಾ. ಎಂ. ಪಿ. ನಾಡಗೌಡರು
(ರಾಜ್ಯ ವಿಧಾನ ಪರಿಷತ್ತು ಸದಸ್ಯರು, ಬಾಗಲಕೋಟ)

ಪ್ರತಿಜ್ಞಾವಿಧಿ, ಕುಸುರೆಳ್ಳಿನ ಹಂಚಿಕೆ, ಮಹಾಮಂಗಲಾಚರಣೆ.

ಶರಣ ಮೇಳ - ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿ

ದಿ. 14-1-1992, ಮಂಗಳವಾರ ಮಧ್ಯಾಹ್ನ 4-30

ಅಧ್ಯಕ್ಷತೆ : ಶರಣ. ಡಿ. ಮಂಜುನಾಥ
(ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು)
ಉದ್ಘಾಟನೆ : ಶರಣ ಎಂ. ಎಲ್. ಉಸ್ತಾದ್
(ಸಚಿವರು, ಗಣಿ ಮತ್ತು ಭೂ ವಿಜ್ಞಾನ)
ಪ್ರಸ್ತಾವನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
(ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ)
ಉಪನ್ಯಾಸ : ಶರಣ. ರಂಜಾನ್ ದರ್ಗಾ
(ಪ್ರಜಾವಾಣಿ ಪ್ರತಿನಿಧಿ, ವಿಚಾರವಾದಿ ಬರಹಗಾರರು)
ವಿಷಯ : ಮಹಾಮಾನವತಾವಾದಿ ಬಸವಣ್ಣನವರು
ಮುಖ್ಯ ಅತಿಥಿಗಳು : ಶರಣ. ಐ. ಎಂ. ವಿಠ್ಠಲಮೂರ್ತಿ, ಐ.ಎ.ಎಸ್
(ಜಿಲ್ಲಾಧಿಕಾರಿಗಳು, ಬಿಜಾಪುರ)
ಶರಣ ಡಾ. ಎಂ. ಪಿ. ನಾಡಗೌಡರು
(ವಿಧಾನ ಪರಿಷತ್ತು ಸದಸ್ಯರು, ಬಾಗಲಕೋಟೆ)
ಆಶೀರ್ವಚನ : ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು
(ಬಸವ ಧರ್ಮಪೀಠ, ಕೂಡಲ ಸಂಗಮ)

ಪ್ರತಿಜ್ಞಾ ಸ್ವೀಕಾರ

ಸಭೆಯಲ್ಲಿ ಭಾಗಿಗಳಾಗಿರುವ ಶರಣ ಬಂಧುಗಳು ರಾಷ್ಟ್ರದ ಆಸ್ತಿಪಾಸ್ತಿಗಳನ್ನು ನಷ್ಟ ಮಾಡುವುದಿಲ್ಲ; ದೇಶ ಪ್ರೇಮ- ಧರ್ಮನಿಷ್ಠೆಗಳಲ್ಲಿ ಸಮತೋಲನ ಕಾಯ್ದುಕೊಳ್ಳುತ್ತೇವೆ ಎಂದು ಪ್ರತಿಜ್ಞೆ ಮಾಡುವರು.

ರಾಷ್ಟ್ರೀಯ ಬಸವ ದಳಗಳ ಐದನೆಯ ಮಹಾಧಿವೇಶನ ಮತ್ತು ಶರಣ ಮೇಳ - ಸಮಾರೋಪ ಸಮಾರಂಭ

ದಿ. 15-1-1992, ಬುಧವಾರ ಬೆಳಿಗ್ಗೆ 10-30

ಸನ್ನಿಧಿ : ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು
(ಗೌರವಾಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಕೂಡಲ ಸಂಗಮ)
ಅಧ್ಯಕ್ಷತೆ : ಪೂಜ್ಯ ಶ್ರೀ ನಿ. ಪ್ರ. ಶಿವಾನಂದ ಸ್ವಾಮಿಗಳು
(ಗುರು ಬಸವೇಶ್ವರ ಸಂಸ್ಥಾನ ಮಠ, ಹುಲ್ಸೂರು)
ಉದ್ಘಾಟನೆ : ಶರಣ. ಧರ್ಮಸಿಂಗ್
(ಗೃಹ ಸಚಿವರು, ಕರ್ನಾಟಕ ಸರ್ಕಾರ)
ಮುಖ್ಯ ಅತಿಥಿಗಳು ಶರಣ. ವಿಲಾಸ ಶಂಕರ್ ಬಾಗಿ
(ಉದ್ದಿಮೆದಾರರು, ಗಡಹಿಂಗ್ಲಾಜ್)
: ಶರಣ. ಆರ್. ಬಿ. ಹೆಬ್ಬಳ್ಳಿ
(ಉದ್ದಿಮೆದಾರರು, ಮುಂಬಯಿ)
ಪ್ರಾಸ್ತಾವಿಕ ಭಾಷಣ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಉಪನ್ಯಾಸಕರು : ಶರಣ. ಬಸವಕುಮಾರ ಪಾಟೀಲ
(ರಾಷ್ಟ್ರೀಯ ಬಸವ ದಳ, ಬೀದರ)
ಶರಣ. ಎಂ.ಎಂ. ಹಿರೇಮಠ
(ಉಪನ್ಯಾಸಕರು, ಮೈಂದರ್ಗಿ, ಮಹಾರಾಷ್ಟ್ರ)
ಶರಣ ಎಂ.ಎಂ. ಕೋಣೇನ
(ಅಧ್ಯಕ್ಷರು, ಶಿವಾನುಭವ ಸಂಘ, ಘಟಪ್ರಭಾ)
ಶರಣ. ಡಾ. ನಿತೀನ ಚಂದ್ರ ಹತ್ತೀಕಾಳ, ಧಾರವಾಡ
(ರಾಜ್ಯಪ್ರಶಸ್ತಿ ವಿಜೇತ ಸಮಾಜ ಸೇವಕರು)
ಶರಣ. ಬಸವಣ್ಣ. ವಿ. ಹಂಪನಗೌಡರು
(ವಚನ ವಿಶ್ಲೇಷಣ ವೇದಿಕೆ, ಬಿಜಾಪುರ)

ಮಹತ್ವಪೂರ್ಣ ನಿರ್ಣಯಗಳು-ಘೋಷಣೆ

ಮಂಡನೆ : **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
(ಕಾರ್ಯಾಧ್ಯಕ್ಷೆ, ಬಸವ ಧರ್ಮ ಸಂಸತ್)
ಅನುಮೋದನೆ : **ಶರಣ ಸಮುದಾಯದಿಂದ**
ಘೋಷಣೆ : **ಶರಣ ಸಮುದಾಯದ ಎದುರಿಗೆ**

ವಿಶೇಷ ಸೂಚನೆ : ಈ ವೇದಿಕೆಯ ಮೇಲೆ ಮುಕ್ತ ಚರ್ಚೆಗೆ ಅವಕಾಶ ಇರುವುದಿಲ್ಲ ಮತ್ತು ಪ್ರಸ್ತುತ ಸಭೆಯಲ್ಲಿ ಘೋಷಿಸಲಾಗುವ ವಿಷಯಗಳನ್ನು ದಿ. 12.1-1992 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲೇ ಚರ್ಚಿಸಲಾಗುವುದು. ಈ ಚರ್ಚಾ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಇರುವುದರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆನ್ನುವ ಶರಣರು ಆ ಗೋಷ್ಠಿಯಲ್ಲಿ ಭಾಗವಹಿಸಬೇಕು.

ಸಾಮೂಹಿಕ ಇಷ್ಟಲಿಂಗಪೂಜೆ

ಬಸವ ತತ್ವದ ಜೀವಾಳ ಕರ್ತನ ಆರಾಧನೆ. ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿಕೊಂಡು ಪೂಜಿಸುವುದು ಈ ಶಿವ ಪಥದ ಮುಖ್ಯ ಆಚರಣೆ. ಆದ್ದರಿಂದ ಪ್ರತಿವರ್ಷದಂತೆ ದಿ. 15-1-1992, ಬುಧವಾರದಂದು ಬೆಳಿಗ್ಗೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜೆಯನ್ನು ತೋರಿಸುವರು. ಅವರೊಡನೆ ಉಳಿದೆಲ್ಲ ಶರಣ-ಶರಣೆಯರು ಕುಳಿತುಕೊಂಡು ಇಷ್ಟಲಿಂಗಾರ್ಚನೆ ಮಾಡಬೇಕು. ಪೂಜಾ ಪರಿಕರಗಳನ್ನು ತೆಗೆದುಕೊಂಡು ಭಾಗಿಗಳಾಗಬೇಕು. ದಿನ ನಿತ್ಯ ಮಾಡುವ ಕ್ರಿಯೆ ಎಂದು ಉದಾಸೀನ ಮಾಡಬಾರದು. ಸಾಮೂಹಿಕ ತಪಸ್ಸಿನಲ್ಲಿ ಅದ್ಭುತ ಶಕ್ತಿಯಿದೆ. ಸಾಮೂಹಿಕ ಸಂಕಲ್ಪದಲ್ಲಿಯೇ ವ್ಯಕ್ತಿ ಮತ್ತು ಸಮಾಜಗಳಿಗೆ ಅಮೂಲ್ಯ ಭವಿಷ್ಯವಿದೆ. ನಂತರ ತೀರ್ಥಪ್ರಸಾದ ವಿತರಣೆ ಇರುವುದು.

ಬಸವ ಜ್ಯೋತಿ ಉದ್ದೀಪನ : ಬಸವ ಧರ್ಮದ ಮಹಾಜಗದ್ಗುರು ಪೀಠದ
ಮಹಾಮಂಗಲಾಚರಣೆ : ಪೀಠಾಧೀಶರಿಂದ

ಶರಣ ಬಂಧುಗಳಿಗೆ ಸೂಚನೆ

1. ಅಕ್ಕಮಹಾದೇವಿ 'ಶಿವಯೋಗ ಮಂಟಪ'ದಲ್ಲಿ ಮೌನವಾಗಿ, ಇಷ್ಟಲಿಂಗಪೂಜೆ ಧ್ಯಾನಾದಿಗಳನ್ನು ಪೂರೈಸಿಕೊಳ್ಳಬೇಕೆನ್ನುವವರು, ಮತ್ತು ಶ್ರೀ ಗುರು ಬಸವಣ್ಣನವರ ಪೂಜೆಯನ್ನು ತಾವೇ ಸ್ವತಃ ಮಾಡಬೇಕೆನ್ನುವವರು ಬೆಳಗಿನ ಜಾವದಲ್ಲೇ ಮಿಂದು ಮಡಿಯುಟ್ಟು ಪೂಜೆಗೆ ಬರಬೇಕು.
2. ಬೆಳಗಿನ 7-30 ರಿಂದ ಸಾರ್ವಜನಿಕರೆಲ್ಲರಿಗೂ ದರ್ಶನಾವಕಾಶ ದೊರೆಯುವುದು.
3. ಬಸವ ಮುದ್ರೆಗಳು, ನಾಣ್ಯಗಳು, ವಿಭೂತಿ, ಕುಸುರೆಳ್ಳು ಲಾಡು ಉಂಡೆ ಮುಂತಾದುವು ಪ್ರಸಾದ ರೂಪದಲ್ಲಿ ಮನೆಗೆ ಒಯ್ಯಲು ಲಭ್ಯವಿರುತ್ತವೆ.
4. ಪೂಜಾ ಮಂಟಪದೊಳಗೆ ತೆಂಗಿನಕಾಯಿ ಒಡೆಯಲು ಅವಕಾಶ ಇರುವುದಿಲ್ಲ. ಹೊರಗಡೆಯೇ ಒಡೆದು ತಂದು, ನೈವೇದ್ಯ ಮಾಡಿಸಿಕೊಂಡು, ತೀರ್ಥ ಪ್ರಸಾದ ತೆಗೆದುಕೊಂಡು ಹೋಗಬೇಕು.

ಸ್ನೇಹ ಸಂಗಮ

ಈಗಿನ ಕಾಲದಲ್ಲಿ ಪರಸ್ಪರ ಸಂಪರ್ಕವು ಬಹಳ ಕಷ್ಟಸಾಧ್ಯವಾದುದರಿಂದ ಮದುವೆಗೆ ಬಂದ ಮಕ್ಕಳಿರುವ ತಾಯಿ ತಂದೆಯರಿಗೆ, ಮತ್ತು ಸೂಕ್ತ ಸಂಗಾತಿಯನ್ನು ಅರಸುತ್ತಿರುವ ವಧುವರರಿಗೆ ಸಹಕಾರ ನೀಡಲೆಂದು ಬೆಂಗಳೂರಿನ ರಾಷ್ಟ್ರೀಯ ಬಸವದಳದವರು '**ಭಾವ ಸಂಗಮ**' ಎಂಬ ವಧುವರ ಹೊಂದಾಣಿಕೆ ಕೇಂದ್ರವನ್ನು ತೆರೆದಿದ್ದು, ಅವರು ದಿ. 15-1- 1992 ರಂದು '**ಸ್ನೇಹ ಸಂಗಮ**' ಎಂಬ ಕಾರ್ಯಕ್ರಮವನ್ನು ಏರ್ಪಡಿಸಿದ್ದಾರೆ. ಸಂಜೆ 6-30 ಕ್ಕೆ ನಡೆಯುವ ಈ ಕಾರ್ಯಕ್ರಮಕ್ಕೆ ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದು ಪಾಲಕರು ಭಾಗಿಗಳಾಗಬಹುದು. ಈ ಶರಣ ಮೇಳಕ್ಕೆ ಬರುವ ಮೊದಲಿಗೆ, ಅಥವಾ ಬಂದ ತಕ್ಷಣ 5 ರೂ ಕೊಟ್ಟು ಅರ್ಜಿಪತ್ರ ತೆಗೆದುಕೊಂಡು 50 ರೂ ಕೊಟ್ಟು ನೋಂದಾಯಿಸಿ, ದಿ. 15-1- 1992 ರ ಸಂಜೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಬಗ್ಗೆ ತಿಳಿಸಬೇಕು. "ಸ್ನೇಹ ಸಂಗಮ" - ಮಹಾಮನೆ ಮಹಾಮಠದ ಆವರಣದಲ್ಲಿ ನಡೆಯುತ್ತಿದ್ದು ಪಾಲಕರು ಭಾಗಿಗಳಾಗಬೇಕು.

ವಿಳಾಸ : ಭಾವ ಸಂಗಮ
ರಾಷ್ಟ್ರೀಯ ಬಸವ ದಳ(ಬೆಂಗಳೂರು)
ಬಸವ ಮಂಟಪ, 2035
II ಬ್ಲಾಕ್, ರಾಜಾಜಿನಗರ
ಬೆಂಗಳೂರು - 560010

ಸ್ನೇಹ ಸಂಗಮ
ರಾಷ್ಟ್ರೀಯ ಬಸವದಳ (ಬೆಂಗಳೂರು)
ಮಹಾಮನೆ ಮಹಾಮಠ
ಕೂಡಲ ಸಂಗಮ - 587115
ತಾ||ಹುನಗುಂದ, ಜಿ. ಬಿಜಾಪುರ

ಶರಣ ಮೇಳ-ಕೆಲವು ವಿಶೇಷ ವಿವರಗಳು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಜಿಲ್ಲಾ ಕೇಂದ್ರ ಮತ್ತು ತಾಲ್ಲೋಕು ಕೇಂದ್ರಗಳಿಂದ ಬಸ್ಸುಗಳನ್ನು ಕೂಡಲ ಸಂಗಮದ ಯಾತ್ರಾರ್ಥಿಗಳಿಗಾಗಿ ಏರ್ಪಡಿಸಿದ್ದಾರೆ. (ಕ. ರಾ. ರ. ಸಾ. ಸಂಸ್ಥೆ ಕೇಂದ್ರ ಕಛೇರಿ ಆದೇಶ ಸಂಖ್ಯೆ 10575/91-92 ದಿ. 27-1-1990) ಆದ್ದರಿಂದ ಸಂಬಂಧಪಟ್ಟ ವಲಯಗಳ ಡಿಪೋ ಮ್ಯಾನೇಜರನ್ನು ಕಂಡು ರಿಸರ್ವೇಶನ್‌ಗಾಗಿ ಕೇಳಿರಿ.

ಯಾವುದೇ ಕಡೆಯಿಂದ ಬರುವ ಪ್ರಯಾಣಿಕರಿಗೆ ಹುನಗುಂದ, ಇಳಕಲ್, ಬಾಗಿಲುಕೋಟೆ, ಬಿಜಾಪುರಗಳಿಂದ ಸಂಪರ್ಕ ಬಸ್ಸುಗಳ ವ್ಯವಸ್ಥೆ ಮಾಡಲಾಗಿದೆ. ಬಾಗಿಲುಕೋಟೆಗೆ ರೈಲ್ವೆ ಮುಖಾಂತರ ಎರಡೂ ದಿಕ್ಕಿನಿಂದ ಬರುವ್ ಯಾತ್ರಾರ್ಥಿಗಳಿಗೆ ರೇಲ್ವೆ ನಿಲ್ದಾಣದಲ್ಲಿ ಬಸ್ ವ್ಯವಸ್ಥೆ ಮಾಡಲಾಗುತ್ತಿದ್ದು ಇಳಿದವರು ನೇರವಾಗಿ ಕೂಡಲ ಸಂಗಮಕ್ಕೆ ಬರಬಹುದು.

ಕೂಡಲಸಂಗಮದಲ್ಲಿ ವಸತಿಗಾಗಿ ಶಾಮಿಯಾನ ಕೋಣೆಗಳ ವ್ಯವಸ್ಥೆ ಇದೆ. ಬಂದವರು ವಿಚಾರಣಾ ಕೇಂದ್ರದಲ್ಲಿ ಮಾಹಿತಿ ಪಡೆದು ವಸತಿಯ ಸೌಲಭ್ಯ ಪಡೆಯಬಹುದು. 100 ರೂ. ಪ್ರತಿನಿಧಿ ಶುಲ್ಕ, 125 ರೂ. ಸದಸ್ಯತ್ವ ಶುಲ್ಕ ; 100 ರೂ ಮತ್ತು ಹೆಚ್ಚು ಕಾಣಿಕೆ ಕೊಟ್ಟವರಿಗೆ ಮತ್ತು ಆಹ್ವಾನಿತರಿಗೆ ಊಟ-ವಸತಿಯ ವ್ಯವಸ್ಥೆಯನ್ನು ಸಮಿತಿಯು ಮಾಡುತ್ತದೆ.

ಉಚಿತ ದಾಸೋಹದ ಸೌಲಭ್ಯವು ಬೇಕಾದವರು ಸಹ ಕಾರ್ಯಾಲಯದಲ್ಲಿ ತಮ್ಮ ವಿವರ ನೀಡಿ ಗುರುತಿನ ಚೀಟಿ (ಬ್ಯಾಡ್ಜ್) ಪಡೆದುಕೊಳ್ಳಿರಿ.

ಸಾರ್ವಜನಿಕ ಕಾರ್ಯಕ್ರಮಗಳು 15-1-1992 ರಂದು ಮಧ್ಯಾಹ್ನ 3 ಗಂಟೆಗೆ ಮುಕ್ತಾಯಗೊಳ್ಳುವ ಕಾರಣ, ಆನಂತರ ಶರಣ ಬಂಧುಗಳು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಬಹುದು.

ಕೇವಲ ಉತ್ಸವ ಸಮಿತಿಯ ಪದಾಧಿಕಾರಿಗಳು ಮತ್ತು ಮುಂದೆ ಸಂಘಟನೆ ಮಾಡಬೇಕೆನ್ನುವ ಉತ್ಸಾಹಿಗಳು- ಮುಖಂಡರು ಉಳಿದುಕೊಳ್ಳಬೇಕು. ಈ ಬಗ್ಗೆ ವಿಶೇಷ ಕಾರ್ಯಕರ್ತರ ಸಭೆಯು ದಿ.15-1-1992 ರಂದು ಸಂಜೆ 6 ರಿಂದ ಮಹಾಮನೆ ಆವರಣದಲ್ಲಿ ನಡೆಯಲಿರುವುದು.

ದಿ. 16-1-1992 ಮಂಗಳವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ಅಖಂಡ ವಚನ ಪಠಣ ಮುಕ್ತಾಯ, ಮಹಾಮಂಗಲ, ಧ್ವಜಾವರೋಹಣ ಕಾರ್ಯಕ್ರಮ.

ಅನೇಕ ಸದ್ಭಕ್ತರು ದೀಕ್ಷೆಯನ್ನು ಪಡೆದುಕೊಳ್ಳಲು ಬಯಸಿ ಪತ್ರ ಬರೆದಿರುವುದರಿಂದ 16-1-1992 ರಂದು ಬೆಳಿಗ್ಗೆ 9 ಗಂಟೆಗೆ ದೀಕ್ಷಾ ಸಂಸ್ಕಾರ ನೀಡಲಾಗುವುದು. ಮಂತ್ರದೀಕ್ಷೆ, ಲಿಂಗದೀಕ್ಷೆ ಪಡೆಯಲಿಚ್ಛಿಸುವ ಉಭಯತರೂ ಮೊದಲೇ ತಿಳಿಸಬಹುದು.

ಕೂಡಲ ಸಂಗಮದಲ್ಲಿ ಸಂದರ್ಶಿಸಬೇಕಾದ ಸ್ಥಳಗಳು

ಸಂಗಮೇಶ್ವರ ದೇವಾಲಯ : ಚಾರಿತ್ರಿಕ, ಪುರಾತನ, ಶಿವ ದೇವಾಲಯ.

ಬಸವೇಶ್ವರ ಐಕ್ಯ ಮಂಟಪ : ಗುರು ಬಸವಣ್ಣನವರ ದಿವ್ಯ ಸಮಾಧಿ.

ಬಸವ ಸಾಗರ : ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಿಂದ ರೂಪುಗೊಂಡಿರುವ ಸುಂದರ ಜಲರಾಶಿ.

ಅಖಂಡ ವಚನ ಪಠಣ ಮಂಟಪ :

ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ದಿನಾಂಕ 9-1- 1992 ರಿಂದ 16-1-92 ರವರೆಗೆ ಅಖಂಡ ವಚನ ಪಠಣ ನಡೆಯುತ್ತಿರುವ ಮಂಟಪ, ಮತ್ತು 16 ಜನ ಶರಣರ ಸುಂದರ ಮೂರ್ತಿಗಳು.

ಶ್ರೀ ಬಸವೇಶ್ವರ ಪೂಜಾಮಂಟಪ : ಮಹಾಮನೆಯ ಆವರಣದಲ್ಲಿರುವ ಇಲ್ಲಿಗೆ ಬಂದು ಪೂಜೆ ಮಾಡಿಸಿ, ದರ್ಶನ ಪಡೆದು, ತೀರ್ಥ ಪ್ರಸಾದವನ್ನು ಪಡೆಯಿರಿ.

ಬಸವ ಮುದ್ರೆ ಮತ್ತು ನಾಣ್ಯ : ಪೂಜ್ಯ ಗುರು ಬಸವಣ್ಣನವರ ಚಿತ್ರ, ಷಟ್ಕೋನ, ಬಸವ ಮಂತ್ರ- ಪಾದಪೀಠ ಸಹಿತ ಇರುವ ಮುದ್ರೆಗಳು ದೊರೆಯುತ್ತವೆ.

ಮುದ್ರೆ : ಚಿಕ್ಕ ಗಾತ್ರದವು 12 ರೂ. ಪ್ಲಾಸ್ಟಿಕ್ ಡಬ್ಬಿ ಸಹಿತ 15 ರೂ
ದೊಡ್ಡ ಗಾತ್ರದವು 20 ರೂ. ಪ್ಲಾಸ್ಟಿಕ್ ಡಬ್ಬಿ ಸಹಿತ 24 ರೂ.

ನಾಣ್ಯ : ತಾಮ್ರ ವರ್ಣ ರೂ 14, ಬೆಳ್ಳಿಯ ವರ್ಣ 15, ಬಂಗಾರದ ವರ್ಣ 16.
ಡಬ್ಬಿ ಬೇಕಾದರೆ 3 ರೂ ಬೇರೆ ಕೊಡಬೇಕು.

ನೀಲಾಂಬಿಕಾ ಐಕ್ಯ ಮಂಟಪ : ನೀಲಾಂಬಿಕಾ ತಾಯಿಯ ಸಮಾಧಿಯು ಕೃಷ್ಣಾ ನದಿಯ ಇನ್ನೊಂದು ಬದಿಗೆ, ತಂಗಡಗಿ ಗ್ರಾಮದ ಬಳಿ ಇದ್ದು ಅತ್ಯಂತ ಸುಂದರ ಪರಿಸರದಲ್ಲಿದೆ. ದೋಣಿಯಲ್ಲಿ ಕುಳಿತು ಪಯಣಿಸಲು ಅವಕಾಶವುಂಟು. ಮಲಪ್ರಭಾ ನದಿಯನ್ನು ದೋಣಿಯಲ್ಲಿ ದಾಟಿ ಬಸ್ಸುಗಳಲ್ಲಿಯೂ ಹೋಗಬಹುದು. ಅಥವಾ ಬಸ್ಸು, ಕಾರುಗಳ ಮೂಲಕ ಬೆಳಗಲ್ ಮಾರ್ಗವಾಗಿ ಹೋಗಬಹುದು. ಕೂಡಲ ಸಂಗಮದಿಂದ ವಿಶೇಷ ಬಸ್ಸುಗಳಿರುತ್ತವೆ.

- ಸೂಚನೆಗಳು -

ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಶರಣ ಮೇಳ ಉತ್ಸವ ಸಮಿತಿಯ ಕಾರ್ಯಾಲಯ ಮತ್ತು ಸಮಾಚಾರ ಕೇಂದ್ರಗಳಿವೆ. ಪ್ರತಿನಿಧಿಗಳು ತಮ್ಮ ರಸೀತಿಗಳನ್ನು ತೋರಿಸಿ ಬ್ಯಾಡ್ಜಸ್ (ಗುರುತಿನ ಚೀಟಿ), ಪ್ರಸಾದ ನಿಲಯದ ಪ್ರವೇಶ ಚೀಟಿ ಮುಂತಾದುವನ್ನು ಪಡೆಯಬೇಕು.

ಕಾಣಿಕೆ ಸಂಗ್ರಹಿಸಲು ರಸೀತಿ ಪುಸ್ತಕ ಪಡೆದವರು ತಾವು ಸಂಗ್ರಹಿಸಿದ ಕಾಣಿಕೆ ಮತ್ತು ರಸೀತಿ ಪುಸ್ತಕಗಳನ್ನು ಕಾರ್ಯಾಲಯದಲ್ಲಿ ಇರುವ ಕೋಶಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ಪುಟ್ಟರುದ್ರಪ್ಪ ಮತ್ತು ಕಲ್ಯಾಣಪ್ಪ ಪರಮಾದಿ ಅವರಿಗೆ ಒಪ್ಪಿಸಿ, ಅವರ ಸಹಿ ಇರುವ ಪಾವತಿ ಪಡೆಯಬೇಕು.

ಶರಣ ಮೇಳ ಕುರಿತು ಮತ್ತಷ್ಟು ವಿವರ

೧. 1992ರ ನೂತನ ವರ್ಷದ ಕ್ಯಾಲೆಂಡರ್, ಭಕ್ತಿಶ್ರೀ, ಬಸವ ಚಂದ್ರಿಕೆ, ಶರಣ ಸೌರಭ ಇತ್ಯಾದಿ ಪೂಜ್ಯ ಮಾತಾಜಿಯವರು ಬರೆದ ಭಕ್ತಿಗೀತೆಗಳ ಕ್ಯಾಸೆಟ್ಟು, "ಬಸವ ಭಾನು" ಎನ್ನುವ ಬಸವಣ್ಣನವರ ಸಮಗ್ರ ಜೀವನ ಚರಿತ್ರೆ ಕುರಿತಾದ ಹಾಡಿನ ಕ್ಯಾಸೆಟ್ಟು ಬಿಡುಗಡೆಯಾಗಿದ್ದು, ಮಾರಾಟಕ್ಕೆ ಲಭ್ಯವಾಗಲಿವೆ.

೨. ಕಾರ್ಯಕ್ರಮದಲ್ಲಿ ಭಾಗಿಗಳಾಗಬೇಕಾದವರು ಹೊದ್ದುಕೊಳ್ಳಲು ಷಟ್‌ಕೋನ ಸಹಿತವಾದ ಮೇಲುವಸ್ತ್ರ (ಸ್ಕಾರ್ಫ್) ಇದೆ. 10 ರೂ. ಗಳಿಗೊಂದರಂತೆ ಲಭ್ಯವಿರುವ ಇವನ್ನು ತಪ್ಪದೇ ಖರೀದಿಸಿ ಉಪಯೋಗಿಸಬೇಕು. ಬಸವಣ್ಣನವರ ಭಾವಚಿತ್ರ, 4 ಮೂಲೆ ಚಿತ್ರಗಳೊಡನೆ ಇರುವ ಪೂಜಾವಸ್ತ್ರದ ಬೆಲೆ 50 ರೂ. ನಿತ್ಯಪೂಜೆಯ ಕಾಲದಲ್ಲಿ ಹೊದೆಯಲು ಚೆನ್ನಾಗಿರುವುದು. ಮಹಾಮನೆ ಆವರಣ, ಸಭಾ ಮಂಟಪ ಎರಡೂ ಕಡೆ ಇವು ದೊರೆಯುತ್ತವೆ.

೩. ಶರಣ ಮೇಳದಲ್ಲಿ ಭಾಗಿಗಳಾದವರು ಮನೆಗೆ 'ಬಸವ ಪ್ರಸಾದ'ವಾಗಿ ಒಯ್ಯಲು "ಲಾಡು" ಮತ್ತು ಕುಸುರೆಳ್ಳಿನ ಪೊಟ್ಟಣ ಮಾರಾಟಕ್ಕಿವೆ. ಸಭಾಮಂಟಪದ ಬಳಿ ಇರುವ ಸ್ಟಾಲಲ್ಲಿ ಅವು ದೊರೆಯುತ್ತವೆ.

೪. ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಮಾತಾಜಿಯವರು ಮಾಡಿರುವ ಪ್ರವಚನಗಳ ಆಡಿಯೋ ಕ್ಯಾಸೆಟ್ಟು, ಭಕ್ತಿಗೀತೆಗಳ ಆಡಿಯೋ ಕ್ಯಾಸೆಟ್ಟು ಮತ್ತು ವೀಡಿಯೋ ಕ್ಯಾಸೆಟ್ಟು ಮಾರಾಟಕ್ಕೆ ಲಭ್ಯವಿರುತ್ತವೆ.

೫. ಪೂಜ್ಯ ಗುರುಗಳ ಪೀಠಾರೋಹಣ ಸಂದರ್ಭದಲ್ಲಿ ಹೂಮಾಲೆಗಳ ಅರ್ಪಣೆ ಮಾಡಬೇಕೆಂಬ ಸದ್ಭಕ್ತರಿಗಾಗಿ ಹೂವಿನ ಅಂಗಡಿಯನ್ನು ಚಳ್ಳಕೆರೆಯ ಮಲ್ಲಿಕಾರ್ಜುನಪ್ಪ ತೆರೆಯಲಿದ್ದು, ಹೂಮಾಲೆಗಳು ಮಾರಾಟಕ್ಕೆ ದೊರೆಯುತ್ತವೆ. ಅಪೇಕ್ಷೆಯುಳ್ಳವರು ಮೊದಲಿಗೇ ಪತ್ರ ಬರೆದು ತಮ್ಮ ಬೇಡಿಕೆ ಸಲ್ಲಿಸಬಹುದು

೬. ಸಮುದಾಯ ಪ್ರಾರ್ಥನಾ ಪುಸ್ತಕ "ವಚನ ಸಂಗಮದ' ಬೆಲೆ ೫ ರೂ. ಕೊಂಡು ಇಟ್ಟುಕೊಳ್ಳಬೇಕು ಮತ್ತು ಪ್ರಾರ್ಥನೆಗೆ ಬರುವಾಗ ತರಬೇಕು. ವಚನ ಸಂಗಮ ಪುಸ್ತಕದ ತೆಲುಗು, ತಮಿಳು ಮತ್ತು ಮರಾಠಿಯ ಅನುವಾದಗಳೂ ಇವೆ.

೭. ವಿಶ್ವಕಲ್ಯಾಣ ಮಿಷನ್‌ರವರ ಪ್ರಕಟಣೆಗಳೇ ಅಲ್ಲದೆ ಇನ್ನೂ ಬೇರೆ ಬೇರೆ ಪ್ರಕಾಶನ ಸಂಸ್ಥೆಗಳವರ ಪುಸ್ತಕಗಳೂ, ಧಾರ್ಮಿಕ ವಸ್ತುಗಳು ಮಾರಾಟಕ್ಕಿವೆ.

ಶರಣ ಮೇಳ ಉತ್ಸವ ಸಮಿತಿಯ ಹೊಣೆಯು ತೀರಾ ಹಿರಿದಾಗಿರುತ್ತದೆ. ಇದನ್ನು ವರ್ಷದಿಂದ ವರ್ಷಕ್ಕೆ ಸುವ್ಯವಸ್ಥಿತವಾಗಿ ವ್ಯಾಪಕವಾಗಿ ಬೆಳೆಸಬೇಕಾದರೆ ಜನರಿಂದ ಸ್ವಯಂ ಪ್ರೇರಣೆಯ ನೆರವು ಅಗತ್ಯ. ಆದ್ದರಿಂದ ಸಹೃದಯರು ಉದಾರವಾಗಿ ದೇಣಿಗೆ ಕಳಿಸಿ, ಸಹಕರಿಸಿ ಒಂದು ಮಾದರಿ ಕಾರ್ಯಕ್ರಮನ್ನಾಗಿ ರೂಪಿಸಬೇಕೆಂದು ಕೋರುವೆವು.

ಕಾರ್ಯಾಧ್ಯಕ್ಷೆ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ

ಬೌದ್ಧಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರ ನೀಡುವ ಉಪನ್ಯಾಸಗಳೊಡನೆ ಹೃನ್ಮನಗಳನ್ನು ತಣಿಸುವ, ಐದನೆಯ ಶರಣ ಮೇಳದಲ್ಲಿ ಏರ್ಪಾಡಾಗಿರುವ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳು

ಶರಣೆ ಉಮಾದೇವಿ, ಬಸವ ಮಂಟಪ-ಶರಣೆ ಗಿರಿಜಮ್ಮ ಸುಬ್ಬಣ್ಣ ಮೈಸೂರು, ಧಾರವಾಡ-ಶರಣೆ, ಉಮಾದೇವಿ ಪೂರ್ವಿಮಠ, ಯರಗಟ್ಟಿ-ಅನ್ನಪೂರ್ಣ ಕಟ್ಟಿ-ಸುಮಿತ್ರಾ ಮರಿಬಸಪ್ಪ ದನದ ಮನಿ-ಅಕ್ಕ ಮಹಾದೇವಿ ದಾನಪ್ಪ-ಬಸವರಾಜ, ಧಾರವಾಡ-ಮಲ್ಲಿಕಾರ್ಜುನಪ್ಪ, ಚಳ್ಳಕೆರೆ-ವಿಶ್ವನಾಥ, ಡೋಣೂರು ಪ್ರಾರ್ಥನಾ ಕಾರ್ಯಕ್ರಮವನ್ನು ನಿರ್ವಹಿಸುವರು.

ತಮಿಳುನಾಡಿನ ಪಚ್ಚೂರು ಸಹೋದರಿಯರಾದ ಶರಣೆ ಶಿವಮ್ಮ ಶಿವಕುಮಾರ್ ಮತ್ತು ಶರಣೆ ನೀಲಮ್ಮ ಕುಮಾರ್ ಇವರು ಆಗಾಗ ಮಧುರ ಕಂಠದಿಂದ ವಚನಗಳನ್ನು ಹಾಡಿ ಮುದಗೊಳಿಸುವರು.

13-1-1992ರ ಸಂಜೆ 4-30 ರಿಂದ ನಡೆಯುವ ಮಕ್ಕಳ ಗೋಷ್ಠಿಯಲ್ಲಿ ಅನೇಕ ಮಕ್ಕಳು ಭಾಗವಹಿಸಿ, ಹಾಡುವಿಕೆ, ನೃತ್ಯಾಭಿನಯ, ಉಪನ್ಯಾಸ ಮಾಡುವರು.

ರಾಷ್ಟ್ರೀಯ ಬಸವ ದಳ, ಶಿವಮೊಗ್ಗ ಅವರು ಅನೇಕ ನೃತ್ಯಗಳನ್ನು ಮತ್ತು ತಾತ್ವಿಕ ನಗೆ ನಾಟಕಗಳನ್ನು ಪ್ರದರ್ಶಿಸುವರು.

ವೀರಗಾಸೆ ಕಂಡ ಶರಣ ಮೆ. ನಾ. ಬೊಮ್ಮಲಿಂಗಪ್ಪ ಅವರಿಂದ 'ಶರಣ ವೈಭವದ' ಅಥವಾ 'ಕೂಡಲ ಸಂಗಮದ ಮಹಿಮೆ' ಎಂಬ ಜಾನಪದ ಪ್ರವಚನ, ಶ್ರೀ ಬನಶಂಕರಿ ಮಂಡಲಿ ಇವರಿಂದ ಜಾನಪದ ರೂಪಕ ಮತ್ತು ವಚನಗೀತೆಯ ಕಾರ್ಯಕ್ರಮ ನಡೆಯುವುದು.

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕಾಟೇರಿ ಗ್ರಾಮದ ಶರಣ. ಗುರುಬಸಪ್ಪನವರ ನೇತೃತ್ವದಲ್ಲಿ ಆರ್. ಚಂದ್ರಶೇಖರ, ಸುಬ್ರಹ್ಮಣ್ಯಂ, ಬಸವನಗರ (ಸಕಲಟ್ಟಿ ಗ್ರಾಮ), ಮನೋಹರ ಕೂನೂರು, ಡಾ|| ಹಾಲ್‌ದೊರೈ, ಕೊಯಮತ್ತೂರು-ಇವರು ವಿಶೇಷವಾದ ಭಜನೆಗಳನ್ನು ಮಾಡಲಿದ್ದಾರು; ಹಾಗೂ ತಮ್ಮ ಜಾನಪದ ವೇಷಗಳೊಡನೆ ಬಸವ ಸ್ತುತಿಯನ್ನು ಮಾಡಲಿರುವರು.

ಪ್ರತಿಭಾವಂತ ಬಾಲಕಿ ಕುಮಾರಿ ಶ್ರುತಿ ಕೆ.ಎಂ. ಭಟ್ ಹಿಂದಿನ ವರ್ಷಗಳಂತೆ ಈ ಬಾರಿಯೂ ತನ್ನ ಪ್ರವಚನ ಮತ್ತು ನೃತ್ಯಗಳಿಂದ ಜನರನ್ನು ರಂಜಿಸಲಿದ್ದಾಳೆ.

ಜಗದೀಶ ಹಾಗಲವಾಡಿ, ಕಟ್ಟೀಮನಿ ಮತ್ತು ಮೃತ್ಯುಂಜಯ, ಭದ್ರಾವತಿ, ಬಾಣೂರು ಚನ್ನಪ್ಪ ವಿಶೇಷ ಯೋಗಾಸನಗಳ ಪ್ರದರ್ಶನ ನೀಡುವರು.

ಕೂಡಲ ಸಂಗಮ-ಸ್ಥಳದ ಮಹತ್ವ ಮತ್ತು ನಿರ್ದೇಶನ

ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕದಲ್ಲಿ ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಲ್ಲಿರುವ ಸುಕ್ಷೇತ್ರ.

ರಾಷ್ಟ್ರೀಯ ಹೆದ್ದಾರಿ ನಂ. 13ಕ್ಕೆ ಕೇವಲ 7 ಕಿಲೋಮೀಟರ್ ದೂರದಲ್ಲಿದೆ. ಹುನಗುಂದದಿಂದ 22 ಕಿ.ಮಿ. ಆಲಮಟ್ಟಿಯಿಂದ 30 ಕಿ.ಮಿ. ಸಂಗಮ ಕ್ರಾಸಿನ ಬಳಿ ಉತ್ಸವ ಸಮಿತಿಯು ವಿಚಾರಣಾ ಕೇಂದ್ರವನ್ನು ಹೊಂದಿರುವುದು. ವಿವರಗಳು ಬೇಕಾದವರು ಇಲ್ಲಿ ಪಡೆಯಬಹುದು.

ಹುನಗುಂದ-ಇಳಕಲ್-ಬಾಗಿಲಕೋಟೆ-ಬಿಜಾಪುರ ನಗರಗಳು ಕೂಡಲ ಸಂಗಮಕ್ಕೆ ಸನಿಹದಲ್ಲಿರುವ ಪ್ರಮುಖ ಪಟ್ಟಣಗಳು. ಈ ಸ್ಥಳಗಳಿಂದ ಕೂಡಲ ಸಂಗಮ ಕ್ಷೇತ್ರಕ್ಕೆ ಬಹಳಷ್ಟು ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ.

ಪುರಾತನ ಶೈವ ಕ್ಷೇತ್ರವಾದ ಕೂಡಲ ಸಂಗಮವು 12ನೆಯ ಶತಮಾನದ ಕಾಲದಲ್ಲಿ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದು ಪ್ರಸಿದ್ಧ ಗುರುಕುಲವನ್ನು ಹೊಂದಿತ್ತು. ಗುರುಕುಲದ ಅಧಿಪತಿಗಳಾದ ಶ್ರೀ ಜಾತವೇದ ಮುನಿಗಳು ಬಹು ಖ್ಯಾತ ಯೋಗಿಗಳಾಗಿದ್ದರು.

ಸಮತಾವಾದಿ, ಕ್ರಾಂತಿಯೋಗಿ ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ತಪಸ್ಸುಗೈದ, ನವಧರ್ಮ ದ್ರಷ್ಟಾರರಾದ ಮತ್ತು ಐಕ್ಯರಾದ ಸ್ಥಾನ ಕೂಡಲ ಸಂಗಮ.

ಈ ದಿವ್ಯ ಸಂಗಮವು ಒಂದು ದಂಡೆಗೆ ಬಸವಣ್ಣನವರ ಐಕ್ಯ ಮಂಟಪವನ್ನು ಮತ್ತೊಂದು ದಂಡೆಗೆ ನೀಲಾಂಬಿಕಾ ತಾಯಿಯ ಐಕ್ಯಮಂಟಪವನ್ನು ಹೊಂದಿದೆ.

ಬಸವ ಧರ್ಮ ಪೀಠ ಟ್ರಸ್ಟ್ ಹತ್ತು ಎಕರೆ ಜಮೀನನ್ನು ಖರೀದಿಸಿ ಶ್ರೀ ಬಸವೇಶ್ವರ ಪೂಜಾ ಮಂಟಪ, ಅತಿಥಿ ಗೃಹ, ಶರಣರ ಮಂಟಪಗಳು ಮುಂತಾದುವನ್ನು ನಿರ್ಮಾಣ ಮಾಡುತ್ತಲಿದೆ.

೧೯೯೨ನೆಯ ಜನವರಿ 12, 13, 14 ಮತ್ತು 15ರಂದು ನಡೆಯಲಿರುವ ಶರಣ ಮೇಳಕ್ಕೆ ನಾಡಿನಾದ್ಯಂತದಿಂದ ಜನರು ಬರಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕಾಂಟ್ರಾಕ್ಟ್) ವಿಶೇಷ ಬಸ್ಸುಗಳನ್ನು ವ್ಯವಸ್ಥೆ ಮಾಡಿದೆ. ಮತ್ತು ರಾಷ್ಟ್ರೀಯ ಹೆದ್ದಾರಿ 13ರ ಮೇಲೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಿ, ಮುಂದೆ ಹೋಗಲು ಸಾರಿಗೆ ಚಾಲಕರಿಗೆ ಆದೇಶ ನೀಡಿದೆ.

ಶರಣ ಮೇಳದ ಸಮಯದಲ್ಲಿ ಬಾಗಿಲಕೋಟೆಯವರೆಗೆ ಟ್ರೇನಿನಲ್ಲಿ ಬಂದು ಕೂಡಲ ಸಂಗಮಕ್ಕೆ ಬರಲು ಸಂಪರ್ಕ ಬಸ್ಸುಗಳ ಅನು ಕೂಲತೆ ಇರುವುದು.

ದೂರವಾಣಿ : 325335

ಶರಣ ಮೇಳ ಉತ್ಸವ ಸಮಿತಿ, ಶಾಖೆಯ ಕಾರ್ಯಾಲಯ

ಬಸವ ಮಂಟಪ 2035, 20ನೇ ಮುಖ್ಯರಸ್ತೆ, ಎರಡನೆಬ್ಲಾಕ್,
ಕಾರ್ಡ್ ರಸ್ತೆ, ರಾಜಾಜಿನಗರ, ಬೆಂಗಳೂರು - 560010

||ಓಂ ಶ್ರೀ ಗುರುಬಸವಲಿಂಗಾಯ ನಮಃ||

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

೧. ಧರ್ಮ ಗುರು-
ಮಂತ್ರಪುರುಷ ವಿಶ್ವಗುರು ಬಸವಣ್ಣನವರು

೨. ಧರ್ಮ ಸಂಹಿತೆ-
ಸಮಾನತೆ ಸಾರುವ ವಚನ ಸಾಹಿತ್ಯ.

೩. ಧರ್ಮ ಲಾಂಛನ-
ವಿಶ್ವದಾಕಾರದಲ್ಲಿರುವ ಪರಮಾತ್ಮನ ಕುರುಹಾದ ಇಷ್ಟಲಿಂಗ.

೪. ಧರ್ಮ ಕ್ಷೇತ್ರ-
ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮ.

೫. ಧರ್ಮ ಧ್ವಜ-
ಬಸವ ಮಂತ್ರ ಸಹಿತ ಷಟ್ಕೋನ ಧ್ವಜ.

೬. ಧರ್ಮದ ಧ್ಯೇಯ-
ಜಾತಿವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಕ್ರಾಂತಿ ದಿನ 15-1-1991ರಂದು ಶರಣ ಸಮುದಾಯವು ಪ್ರತಿಜ್ಞಾಪೂರ್ವಕವಾಗಿ ಘೋಷಿಸಿದ ಸೂತ್ರಗಳು.

ಕರ್ತವ್ಯ

ಬಸವ ಕ್ರಾಂತಿಯ ದಿನದಿ ಸಂಗಮಕ್ಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ||

ಕೂಡಲ ಸಂಗಮ ಕ್ರಾಸಿಗೆ ಬರುವ
ಕ.ರಾ.ರ.ಸಾ. ಸಂಸ್ಥೆ ಬಸ್ಸುಗಳ ವಿವರ

ರಾಷ್ಟ್ರೀಯ ಹೆದ್ದಾರಿ ನಂ. 13, ಬೆಂಗಳೂರು- ಸೊಲ್ಲಾಪುರವನ್ನು ಸಂಪರ್ಕಿಸುವ ರಸ್ತೆ. ಬೆಂಗಳೂರಿನಿಂದ ಚಿತ್ರದುರ್ಗದವರೆಗೆ, ರಾಷ್ಟ್ರೀಯ ಹೆದ್ದಾರಿ 4 ಮತ್ತು 13 ಒಂದೇ ಇದ್ದು, ಚಿತ್ರದುರ್ಗದಿಂದ 13 ನೇ ನಂಬರ್ ಟಿಸಿಲು ಒಡೆಯುತ್ತದೆ. ಚಿತ್ರದುರ್ಗ- ಹೊಸಪೇಟೆ-ಕುಷ್ಟಗಿ- ಇಳಕಲ್-ಹುನಗುಂದ- ಆಲಮಟ್ಟಿ ಹೀಗೆ ಬಿಜಾಪುರ- ಸೊಲ್ಲಾಪುರಕ್ಕೆ ಸಾಗುತ್ತದೆ. ಹುನಗುಂದ ದಾಟಿದ ಮೇಲೆ, ಆಲಮಟ್ಟಿಗೆ ಮೊದಲು ಕೂಡಲ ಸಂಗಮ ಕ್ರಾಸ್ ಬರುತ್ತದೆ. ಇಲ್ಲಿಗೆ ಕೂಡಲ ಸಂಗಮವು 7 ಕಿಲೋಮೀಟರ್ ಇರುತ್ತದೆ. ಈ ಸ್ಥಳಕ್ಕೆ ಬಾಗಲಕೋಟೆ, ಇಳಕಲ್, ಬಾದಾಮಿ, ಬಿಜಾಪುರ ಮುಂತಾದ ಸ್ಥಳಗಳಿಂದ ಬರುವ ರಸ್ತೆ ಕೂಡುತ್ತವೆ. ಈ ಕ್ರಾಸಿಗೆ ಬಂದು ಹೋಗುವ ಬಸ್ಸುಗಳ ವಿವರ ಕೊಡಲಾಗಿದೆ.

	ಬರುವ ವೇಳೆ	ಬಿಡುವ ವೇಳೆ
1. ಕೂಡ್ಲಿಗಿ-ಸಂಗಮ	ಸಂಜೆ 6-15	
2. ಸಂಗಮ-ಕೂಡ್ಲಿಗಿ		ಬೆಳಿಗ್ಗೆ 6- 15
3. ಸೊಲ್ಲಾಪುರ-ಇಳಕಲ್	ರಾತ್ರಿ 10-30	
4. ಇಳಕಲ್-ಸೊಲ್ಲಾಪುರ		ಬೆಳಿಗ್ಗೆ 6-30
5. ಸವದತ್ತಿ-ಸಂಗಮ	ಸಂಜೆ 7-30	
6. ಸಂಗಮ-ಸವದತ್ತಿ		ಬೆಳಿಗ್ಗೆ 7- 30
7. ಸಂಕೇಶ್ವರ-ಸಂಗಮ	ಸಂಜೆ 7-30	
8. ಸಂಗಮ-ಸಂಕೇಶ್ವರ		ಬೆಳಿಗ್ಗೆ 7-30
9. ಬಾದಾಮಿ-ಸಂಗಮ	ರಾತ್ರಿ 8-30	
10. ಸಂಗಮ-ಬಾದಾಮಿ		ಬೆಳಿಗ್ಗೆ 7-00
11. ಇಳಕಲ್-ಬಿಜಾಪುರ		ಬೆಳಿಗ್ಗೆ 8-00
12. ಬಿಜಾಪುರ-ಇಳಕಲ್	ರಾತ್ರಿ 8-00	
13. ಬೆಂಗಳೂರು-ಇಂಡಿ		ಬೆಳಿಗ್ಗೆ 7-30
14. ಇಂಡಿ-ಬೆಂಗಳೂರು	ರಾತ್ರಿ 12-30	
15. ಬಾಗಲಕೋಟೆ- ಸಂಗಮ		ಬೆಳಿಗ್ಗೆ 9-10
16. ಸಂಗಮ- ಬಾಗಲಕೋಟೆ		ಬೆಳಿಗ್ಗೆ 10-00
17. ಇಳಕಲ್-ಸಂಗಮ		ಬೆಳಿಗ್ಗೆ 8-00
18. ಬಾಗಲಕೋಟೆ- ಸಂಗಮ		ಬೆಳಿಗ್ಗೆ 10-30
19. ಸಂಗಮ - ಬಾಗಲಕೋಟೆ		ಬೆಳಿಗ್ಗೆ 11-30
20. ಅಕ್ಕಿ ಆಲೂರು- ಬಿಜಾಪುರ	ಸಂಜೆ 5-00	
21. ಬಿಜಾಪುರ-ಅಕ್ಕಿ ಆಲೂರು		ಬೆಳಿಗ್ಗೆ 9-00
22. ಕೊಪ್ಪಳ- ಬಿಜಾಪುರ		ಬೆಳಿಗ್ಗೆ 9-00
23. ಬಿಜಾಪುರ-ಕೊಪ್ಪಳ	ಸಂಜೆ 6-00	
24. ಹಿರೇಕೆರೂರ-ಬಿಜಾಪುರ	ಸಂಜೆ 10-30	
25. ಬಿಜಾಪುರ ಹಿರೇಕೆರೂರ	ಸಂಜೆ 6-30	
26. ಹುನಗುಂದ- ಸಂಗಮ		ಬೆಳಿಗ್ಗೆ 10-00
27. ಇಳಕಲ್- ಸಂಗಮ		ಮಧ್ಯಾಹ್ನ 12- 00
28. ಕೊಪ್ಪಳ- ತಾಳೀಕೋಟೆ		ಬೆಳಿಗ್ಗೆ 10-30
29. ತಾಳೀಕೋಟೆ-ಕೊಪ್ಪಳ	ಸಂಜೆ 4-30	
30. ಲಕ್ಷ್ಮೇಶ್ವರ-ಇಂಡಿ	ಸಂಜೆ 4-30	
31. ಇಂಡಿ-ಲಕ್ಷ್ಮೇಶ್ವರ		ಬೆಳಿಗ್ಗೆ 11-00
32. ಬೆಂಗಳೂರು-ಸಂಗಮ	ಸಂಜೆ 7- 00	
33. ಸಂಗಮ-ಬೆಂಗಳೂರು	ಸಂಜೆ 7-00	
34. ಅಮೀನಗಡ-ಸಂಗಮ	ಸಂಜೆ 4-00	
35. ಬಾಗಲಕೋಟೆ- ಸಂಗಮ	ಸ಼ಂಜೆ 4-00	
36. ಬಾಗಲಕೋಟೆ- ಸಂಗಮ		ಮಧ್ಯಾಹ್ನ 12- 00
37. ಸಂಗಮ- ಬಾಗಲಕೋಟೆ		ಮಧ್ಯಾಹ್ನ 1-30
38. ಸಂಗಮ- ಬಾಗಲಕೋಟೆ	ಸಂಜೆ 4-30	
39. ಮೈಸೂರು- ಸೊಲ್ಲಾಪುರ		ಬೆಳಿಗ್ಗೆ 5-00
40. ಸೊಲ್ಲಾಪುರ-ಮೈಸೂರು	ರಾತ್ರಿ 9-00	
41. ಸೂಪರ್ ಡೀಲಕ್ಸ್, ಬೆಂಗಳೂರು-ಬಿಜಾಪುರ		ಬೆಳಿಗ್ಗೆ 6-00
42. ಸೂಪರ್ ಡೀಲಕ್ಸ್ ಬಿಜಾಪುರ-ಬೆಂಗಳೂರು	ಸಂಜೆ 7-30	
43. ಸೆಮಿ ಲಕ್ಷುರಿ ಬೆಂಗಳೂರು-ಬಿಜಾಪುರ		ಬೆಳಿಗ್ಗೆ 4-30
44. ಸೆಮಿ ಲಕ್ಷುರಿ ಬಿಜಾಪುರ-ಬೆಂಗಳೂರು	ರಾತ್ರಿ 11-00	
45. ಬೆಂಗಳೂರು-ಬಿಜಾಪುರ	ಸಂಜೆ 6-00	

1. ಶರಣ ಮೇಳ ಉತ್ಸವ ಸಮಿತಿಯು ಸಂಗಮ ಕ್ರಾಸಿನಲ್ಲಿ ಈ ಬಾರಿ, ಒಂದು ಶಾಮಿಯಾನ ಹಾಕಿಸುತ್ತದೆ. ಅವೇಳೆಯಲ್ಲಿ ಬಂದವರು ಕುಳಿತುಕೊಳ್ಳಲು ಮತ್ತು ವಿವರಗಳನ್ನು ಪಡೆಯಲು ಈ ವಿಚಾರಣಾ ಕೇಂದ್ರ ಲಭ್ಯವಿರುತ್ತದೆ.

2. ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಿ.12-1-92 ರಿಂದ 16-1-92 ರ ವರೆಗೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 13 ರ ಮೇಲೆ ಸಂಚರಿಸುವ ನಿಗಮದ ಎಲ್ಲ ಸಾರಿಗೆಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ನಿಲ್ಲಿಸಲು ಸೂಚನೆ ನೀಡಿದೆ ಎಂಬುದನ್ನು ಜನರ ಗಮನಕ್ಕೆ ತರುತ್ತಿದ್ದೇವೆ.

ಕ.ರಾ.ರ.ಸಾ. ಸಂಸ್ಥೆಯ ಆದೇಶ

ಕ.ರಾ.ರ.ಸಾ. ಸಂಸ್ಥೆಯು ಸಂ: ಕಾರ್ಯ ಬಿ.ವಿ. 186: 10575: 91-92 ದಿ. 27-12-91ದ ಪತ್ರದ ಮೂಲಕ 1992ನೆಯ ಜನವರಿ 12, 13, 14, 15 ರಂದು ಕೇಂದ್ರಗಳು, ಮತ್ತು ಇತರ ಮುಖ್ಯ ಸ್ಥಳಗಳಿಂದ ಹೆಚ್ಚುವರಿ ಬಸ್ಸುಗಳನ್ನು ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ಬಿಡಲು ನಿಯಂತ್ರಣಾಧಿಕಾರಿಗಳಿಗೆ ಆದೇಶ ಕಳಿಸಿದೆ. ಇದರ ಸೌಲಭ್ಯವನ್ನು ಉಪಯೋಗಪಡಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಶರಣ ಮೇಳ ಉತ್ಸವ ಸಮಿತಿಯಿಂದ ಬಸ್

ಕೂಡಲ ಸಂಗಮದಲ್ಲಿ ಮಹಾಮನೆಯಿಂದ ಕಾರ್ಯಕ್ರಮ ನಡೆಯುವ ಪೆಂಡಾಲ್‌ವರೆಗೆ ಸ್ವಲ್ಪ ನಡೆಯಬೇಕಾಗುವ ಕಾರಣ ಅನೇಕ ಶರಣ ಬಂಧುಗಳು ಸ್ಥಳೀಯ ಓಡಾಟಕ್ಕೆ ಬಸ್ ಏರ್ಪಡಿಸಬೇಕೆಂದು ಕೋರಿರುತ್ತಾರೆ. ಅದಕ್ಕಾಗಿ ಶರಣ ಮೇಳ ಉತ್ಸವ ಸಮಿತಿಯು ಈ ಬಾರಿ ಸ್ವತಃ ತಾನೇ ಓಡಾಟಕ್ಕಾಗಿ ಬಸ್ಸನ್ನು ಏರ್ಪಡಿಸಿದೆ. ಒಂದು ಸಲಕ್ಕೆ ಒಂದು ರೂಪಾಯಿ. 12ರಿಂದ 15ರ ವರೆಗಿನ 4 ದಿವಸಗಳಲ್ಲಿ ಸುಮಾರು 10 ಬಾರಿ ಓಡಾಡಬೇಕಾಗುವುದು. ಒಟ್ಟಾಗಿ ಟಿಕೆಟ್ ತೆಗೆದುಕೊಂಡರೆ 8 ರೂಪಾಯಿ. ಇದು ಉಪಯುಕ್ತವಾಗಿ ಕಂಡು ಹೆಚ್ಚಿನ ಜನರು ಈ ಅವಕಾಶ ಉಪಯೋಗಿಸಿಕೊಂಡು ಸಮಿತಿಗೆ ನಷ್ಟವಾಗದಿದ್ದರೆ ಈ ವ್ಯವಸ್ಥೆಯನ್ನು ಪ್ರತಿವರ್ಷವೂ ಮುಂದುವರಿಸಲಾಗುವುದು.

ಶರಣ ಮೇಳ ದಾಸೋಹಕ್ಕೆ ಕಾಯಂ ನಿಧಿ

ಶರಣ ಮೇಳವು ಪ್ರತಿವರ್ಷವೂ ನಡೆಯುವ ಮಹತ್ವ ಪೂರ್ಣ ಕಾರ್ಯಕ್ರಮ. ನಾಡಿನಾದ್ಯಂತದಿಂದ ಶರಣರು ಬಂದು ಪ್ರಸಾದ ದಾಸೋಹದಲ್ಲಿ ಭಾಗಿಗಳಾಗುವರು. ತಮ್ಮ ಕೊಡುಗೆಯು ಪ್ರತಿವರ್ಷವೂ ಸಲ್ಲಬೇಕು ಎನ್ನುವವರು ಅದಕ್ಕೆ ತಕ್ಕಂತೆ ಕಾಯಂನಿಧಿಗೆ ಹಣ ಕೊಡಬಹುದು. 10,000 ರೂ ಕೊಟ್ಟರೆ ಪ್ರತಿವರ್ಷವೂ ಸುಮಾರು 1100 ರೂ ಬಡ್ಡಿ ಬರುವುದು 5000 ರೂ ಕೊಟ್ಟರೆ ಸುಮಾರು 550 ರೂ ಜಮಾ ಆಗುವುದು. ಶರಣ ಮೇಳದ ಸಮಯಕ್ಕೆ ವಾರ್ಷಿಕ ಬಡ್ಡಿ ದೊರೆಯುವಂತೆ ಮಾಡಿ, ದಾಸೋಹಕ್ಕೆ ಹಣದ ಸದುಪಯೋಗ ಮಾಡಲಾಗುವುದು.

||ಓಂ ಶ್ರೀ ಗುರುಬಸವ ಲಿಂಗಾಯ ನಮಃ||

1992ನೇ ಸಾಲಿನ ಹಬ್ಬ-ಹುಣ್ಣಿಮೆಗಳು-ಜನ್ಮ ದಿನೋತ್ಸವಗಳು

1. ಬಸವಕ್ರಾಂತಿ ದಿನದ ಅಂಗವಾಗಿ ಶರಣ ಮೇಳ ಜನವರಿ 12ರಿಂದ 15 ರವರೆಗೆ
2. ಸಿದ್ಧರಾಮೇಶ್ವರ ಜಯಂತಿ ★ ಜನವರಿ 15
3. ಗಣರಾಜ್ಯೋತ್ಸವ ದಿನ ★ ಜನವರಿ 26
4. ಚನ್ನಹುಣ್ಣಿಮೆ (ಉಳವಿ ಜಾತ್ರೆ) ಫೆಬ್ರವರಿ 18
5. ಸರ್ವಶರಣರ ದಿನಾಚರಣೆ (ಶಿವರಾತ್ರಿ) ★ ಮಾರ್ಚ 2
6. ಪೂಜ್ಯ ಮಾತಾಜಿಯವರ ವರ್ಧಂತಿ ಮಾರ್ಚ 13
7. ಅಲ್ಲಮಪ್ರಭು ಜಯಂತಿ (ಯುಗಾದಿ) ★ ಏಪ್ರಿಲ್ 4
8. ಅಕ್ಕಮಹಾದೇವಿ ಜಯಂತಿ ★ ಏಪ್ರಿಲ್ 17
9. ಮಡಿವಾಳ ಮಾಚಿದೇವ ಜಯಂತಿ ಮತ್ತು ಕಾಯಕ ದಿನಾಚರಣೆ ★ ಮೇ 1
10. ಬಸವ ಜಯಂತಿ ★ ಮೇ 5
11. ಬಸವ ಪಂಚಮಿ (ಬಸವ ಲಿಂಗೈಕ್ಯ ದಿನ) ಆಗಸ್ಟ 3
12. ನೀಲಮ್ಮ ಷಷ್ಠಿ ಆಗಸ್ಟ 4
13. ಸ್ವಾತಂತ್ರ್ಯ ದಿನೋತ್ಸವ ★ ಆಗಸ್ಟ 15
14. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಗುರುಗಳ ವರ್ಧಂತಿ ★ ಆಗಸ್ಟ 31
15. ಗಾಂಧಿ ಜಯಂತಿ ★ ಅಕ್ಟೋಬರ್ 2
16. ಕಲ್ಯಾಣ ಕ್ರಾಂತಿ ದಿನ (ಮಹಾನವಮಿ) ★ ಅಕ್ಟೋಬರ್ 6
17. ಬಸವ ಧರ್ಮ ವಿಜಯೋತ್ಸವ (ವಿಜಯದಶಮಿ) ★
    ಅಕ್ಕನಾಗಲಾಂಬಿಕಾ ಸಂಸ್ಮರಣಾ ದಿನ ಅಕ್ಟೋಬರ್ 6
18. ಚನ್ನಬಸವ ಜಯಂತಿ (ಕಾರ್ತಿಕ ಪ್ರತಿಪದೆ) ★ ಅಕ್ಟೋಬರ್ 26

★ ಸರ್ಕಾರಿ ರಜಾದಿನಗಳು

ಪ್ರಕಟಣೆ
ಬಸವ ಧರ್ಮ ಪೀಠ (ರಿ.)
ಮಹಾಮನೆ ಸಂಗಮ -587115
ತಾ||ಹುನಗುಂದ, ಜಿಲ್ಲ-ಬಿಜಾಪುರ

ದಾಸೋಹದ ಮಹತ್ವ

ತೊಟ್ಟು ಬಿಡದನ್ನಕ್ಕ ಮತ್ತಾಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ ಕೃತ್ಯವಿರಬೇಕು -ಆಯ್ದಕ್ಕಿ ಲಕ್ಕಮ್ಮ

ಒಂದು ಹಣ್ಣು ಎಲ್ಲಿಯವರೆಗೆ ತೊಟ್ಟಿನ ಮೂಲಕ ಗಿಡಕ್ಕೆ ಅಂಟಿಕೊಂಡಿರುವುದೋ ಅಲ್ಲಿಯವರೆಗೆ ಅದು ಗಿಡದ ಹಿತಚಿಂತನೆಯನ್ನೂ ಮಾಡಲೇಬೇಕು. ಗಿಡಕ್ಕೆ ಏನಾದರೇನು ಎಂದುಬಿಟ್ಟರೆ ತನ್ನ ಅವನತಿಯೂ ಅದರಲ್ಲಿದೆ ಎಂಬ ತಿಳುವಳಿಕೆ ಇಲ್ಲವೆಂದೇ ಅರ್ಥ! ಹಾಗೆ ವ್ಯಕ್ತಿ ಎನ್ನುವ ಹಣ್ಣು ಮರ್ತ್ಯ ಎನ್ನುವ ಗಿಡಕ್ಕೆ ಧರ್ಮ ಎನ್ನುವ ತೊಟ್ಟಿನ ಸಹಾಯದಿಂದ ಅಂಟಿಕೊಂಡಿರುವ ಕಾರಣ ವ್ಯಕಿಯು ಮರ್ತ್ಯದ ಹಿತಚಿಂತನೆ ಮಾಡಲೇಬೇಕು. ಮರ್ತ್ಯದ ಬದುಕು ಮಂಗಲಮಯವಾಗಬೇಕಾದರೆ ಸತ್ಯ ಶರಣರ ಸಂಗದಲ್ಲಿದ್ದು, ಜಂಗಮ ಸೇವೆಯನ್ನು ಮಾಡುತ್ತಿರಬೇಕು. ದಾಸೋಹದ ಮಹತ್ವವನ್ನರಿತು ನೀವು ಕೊಡುವುದಲ್ಲದೆ ನಿಮ್ಮ ಬಂಧುಬಳಗ, ಮಿತ್ರರು, ಆತ್ಮೀಯರುಗಳಿಂದಲೂ ಉದಾರವಾದ ಧನ ಸಹಾಯ ಮಾಡಿಸಲು ಪ್ರಯತ್ನಿಸಿರಿ.

ಧರ್ಮಕ್ಷೇತ್ರದ ಅಭಿವೃದ್ಧಿಗಾಗಿ ಮುಡಿಪು

ಇಂದು ನಮ್ಮ-ನಿಮ್ಮೆಲ್ಲರ ಮೇಲೆ ಬಹುದೊಡ್ಡ ಹೊಣೆ ಬಿದ್ದಿದೆ. ಜಗತ್ತಿಗೆ ಸಮತಾವಾದದ ಸಂದೇಶವನ್ನು ಸಾರಿದ, 'ದೇವನೊಬ್ಬನೆ ತಂದೆ, ಮನುಜರೆಲ್ಲರು ಒಂದೇ'. 'ಅರಿದೊಡೆ ಶರಣ, ಮರೆದೊಡೆ ಮಾನವ' ಎಂದು ಅರ್ಹತಾ ಪರಂಪರೆಯನ್ನೇ ಎತ್ತಿ ಹಿಡಿದ ಬಸವ ಸಂಸ್ಕೃತಿಯ ಬೀಡನ್ನಾಗಿ ಕೂಡಲ ಸಂಗಮವನ್ನಿಂದು ಬೆಳೆಸಿ, ರೂಪಿಸಿ ಭಾವೀಜನಾಂಗಕ್ಕೆ ಕೊಟ್ಟು ಹೋಗಬೇಕಾಗಿದೆ. ಈ ಮಹಾನ್ ಕಾರ್ಯಕ್ಕಾಗಿ ನಮ್ಮನ್ನು ನಾವಿಂದು ಸಮರ್ಪಿಸಿಕೊಂಡು ದುಡಿಯಬೇಕಾಗಿದೆ. ಅದಕ್ಕಾಗಿ ನಿಮ್ಮೆಲ್ಲರ ಮನೆಗಳ ಪೂಜಾ ಮಂದಿರಗಳಲ್ಲಿ, ಟ್ರೆಷರಿಗಳಲ್ಲಿ ಮುಡುಪಿನ ಡಬ್ಬಿ ಸ್ಥಾನವನ್ನಲಂಕರಿಸಲಿ. ನಿಮಗೆ ಅನುಕೂಲವಾದಷ್ಟನ್ನು ಭಕ್ತಿ ತುಂಬಿ ಮೀಸಲಿರಿಸಿ, ಮುಡುಪಿನ ಪೆಟ್ಟಿಗೆಯಲ್ಲಿ ಶೇಖರಿಸಿರಿ. ತನು ದಾಸೋಹ, ಮನ ದಾಸೋಹ, ಧನ ದಾಸೋಹ ಈ ಮೂರರಿಂದಲೂ ಸಂಗಮಕ್ಷೇತ್ರವನ್ನು ಕಟ್ಟೋಣ; ಶರಣ ತತ್ತ್ವ ಸೌರಭ ಇಲ್ಲಿಂದ ಹರಡುವಂತೆ ಶ್ರಮಿಸೋಣ. ನಿಮ್ಮ ಮುಡುಪಿನ ಹಣವನ್ನು ಸೂಕ್ತ ಸಮಯದಲ್ಲಿ ಸಮರ್ಪಿಸಲು ನಿಶ್ಚಯಿಸಿ, ಸಂಗ್ರಹಿಸಲು ಆರಂಭಿಸಿರಿ.

ಮನಿಯಾರ್ಡರ್, ಚೆಕ್ಕು, ಡ್ರಾಫ್ಟ್ ಯಾವುದೇ ರೀತಿಯಲ್ಲಿ ಕಳಿಸಬೇಕೆನ್ನುವವರು ಈ ಕೆಳಗೆ ಕೊಡಲಾಗಿರುವ ವಿಳಾಸಕ್ಕೆ ಕಳಿಸಿಕೊಡಿರಿ.

ಹಿಂದಿನ ಪುಟದಲ್ಲಿ ಸರ್ವಜ್ಞನ ತ್ರಿಪದಿಯೊಂದನ್ನು ಉಲ್ಲೇಖಿಸಲಾಗಿದೆ. ಇದು ಸರ್ವಜ್ಞನ, ಹೀಗಾಗಬೇಕೆಂಬ ಬಯಕೆಯ ಮಾತೋ ಅಥವಾ ಹೀಗಾಗುವುದೆಂಬ ಭವಿಷ್ಯ ನುಡಿಯೋ, ಅದನ್ನು ನನಸು ಮಾಡಲು ಒಟ್ಟಾಗಿ ದುಡಿಯೋಣ ಬನ್ನಿ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ
ಕೂಡಲ ಸಂಗಮ - 587115
ತಾ|| ಹುನಗುಂದ, ಬಿಜಾಪುರ ಜಿಲ್ಲೆ.

ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು ॥ ಪ ॥

"ಧರ್ಮಗುರು ಬಸವಣ್ಣ" ಎಂದು ಸಾರಿ ನುಡಿವೆವು.
"ವಚನ ಶಾಸ್ತ್ರ ಸಂವಿಧಾನ"ವೆಂದು ತಿಳಿದು ನಡೆವೆವು
"ಇಷ್ಟಲಿಂಗ ದೇವಕುರುಹು" ಎಂದು ನಂಬಿ ಪೂಜಿಪೆವು
"ಸಂಗಮವು ಧರ್ಮಕ್ಷೇತ್ರ" ಎಂದು ತಿಳಿದು ಬರುವೆವು ॥೧॥

"ಷಟ್ಕೋನ ಬಸವ ಧ್ವಜವ" ಹಿಗ್ಗಿನಿಂದ ಹಾರಿಪೆವು.
"ಕಲ್ಯಾಣ ರಾಜ್ಯ" ಕಟ್ಟುವ ಧ್ಯೇಯವಿಟ್ಟು ದುಡಿವೆವು
"ಶರಣ ಮೇಳ"ವಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
"ಬಸವ ಧರ್ಮಪೀಠ"ದ ಆದೇಶದಂತೆ ನಡೆವೆವು ॥೨॥

"ಅಷ್ಟಾವರಣ" ಅಂಗವೆಂದು ನಾವು ನಿತ್ಯ ಧರಿಪೆವು
"ಪಂಚಾಚಾರ" ಪ್ರಾಣವೆಂದು ಅನುಷ್ಠಾನ ಗೈವೆವು ।
"ಷಟಸ್ಥಲ" ಶಿವಪಥದಿ ಶ್ರದ್ಧೆಯಿಂದ ಸಾಗುವೆವು
ಗುರುಬಸವ ತಂದೆಯು ಮೆಚ್ಚುವಂತೆ ಬಾಳುವೆವು ॥೩॥

ಜಾತಿವಾದ ಮನುಜಗೈದ ತಂತ್ರವೆಂದು ಸಾರುವೆವು
ನೀತಿಸಿರಿಯು ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
ದೇವನೊಬ್ಬ ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
ವಿಶ್ವಸೋದರತ್ವ ಸಾರಿ ಕಲ್ಯಾಣರಾಜ್ಯ ಕಟ್ಟುವೆವು ॥೪॥

—ಜಗದ್ಗುರು ಮಾತೆ ಮಹಾದೇವಿ


[ಬಸವ ತತ್ತ್ವಾನುಯಾಯಿಯ ಜೀವನದ ನಂಬಿಕೆ ಆಚರಣೆ ಹೇಗಿರಬೇಕೆಂಬುದನ್ನು ತಿಳಿಸುವ ಈ ಪದ್ಯವನ್ನು ಮನನ ಮಾಡಬೇಕು, ಕಲಿಯಬೇಕು.]

KRNB 312/BGW-92

... ಉತ್ಸವ ಸಮಿತಿ
ಮಹಾಮನೆ ಮಹಾಮಠ,
ಕೂಡಲ ಸಂಗಮ-587115,
ತಾ-ಹುನಗುಂದ, ಜಿಲ್ಲಾ-ಬಿಜಾಪುರ.

December
1991

ಕರ್ನಾಟಕ



ಕೂಡಲ ಸಂಗಮ-ಸ್ಥಳ ನಿರ್ದೇಶನ